ಕೈಕೊಂಡಿತು. ಪ್ರತಿಯೊಬ್ಬ ಮಂತ್ರಿಗಳೂ 4-5 ದಿವಸ ಜಿಲ್ಲೆಗಳಲ್ಲಿ ಪ್ರವಾಸಮಾಡಿ ಒಪ್ಪಿಸಿದ ವರದಿಯನ್ನು ಕ್ರೋಢೀಕರಿಸಿ ಇರುವ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಏನು ಕ್ರಮ ಗಳನ್ನು ಕೈಕೊಳ್ಳಬೇಕೆಂಬುದನ್ನು ಯೋಚಿಸಿ ತೀರ್ಮಾನಮಾಡಲಾಯ್ತು. ತಕ್ಷಣ ಇರುವ ಬೆಳೆ ಒಣಗದಂತೆ ಕಾಪಾಡಬೇಕಾಗಿತ್ತು. ಅದಕ್ಕೆ ಸರಕಾರ ಸೂಕ್ತ ಗಮನಕೊಟ್ಟು ಪಂಪುಸೆಟ್ಟು, ಡೀಸೆಲ್ ಪಂಪುಸೆಟ್ಟು ಮುಂತಾದುವುಗಳನ್ನೊದಗಿಸಲು ಒಂದು-ಒಂದೂವರೆ ಕೋಟಿ ರೂಪಾಯಿ ಗಳನ್ನು ಖರ್ಚುಮಾಡಲಾಯ್ತು, ಅದನ್ನು ವಿವರವಾಗಿ ವ್ಯವಸಾಯ ಶಾಖೆ ಸಚಿವರು ಹೇಳುತ್ತಾರೆ. ಆಮೇಲೆ ಮಳೆ ಬರುವವರೆಗೆ ವ್ಯವಸಾಯಗಾರರಿಗೆ ಕೆಲಸ ಒದಗಿಸಬೇಕಾದ್ದು ಸರಕಾರದ ಕರ್ತವ್ಯ ಎಂದು ಅದಕ್ಕೆ ಏರ್ಪಾಡು ಮಾಡಲಾಯ್ತು. ನವೆಂಬರಿನಲ್ಲಿ ಕೆಲವು ಕಡೆ ಮಳೆಯಾದರೂ ಒಣಗುವ ಬೆಳೆ ಸ್ವಲ್ಪ ಉಳಿದರೂ ವ್ಯವಸಾಯದ ಕೆಲಸ ಡಿಸೆಂಬರು ಮತ್ತು ಜನವರಿ—ಈ ಎರಡು ತಿಂಗಳು ಗಳಲ್ಲಿ ಮಾತ್ರ ಇರುವುದರಿಂದ ಆ ಎರಡು ತಿಂಗಳು ಅಷ್ಟು ಅಭಾವ ಕಾಣುವುದಿಲ್ಲ. ಮುಂಗಾರಿ ಮಳೆ ಚೆನ್ನಾಗಿ ಬಂದು ರೈತರಿಗೆ ಕಾಳು ಮನೆಗೆ ಬರಬೇಕಾದರೆ ಅಕ್ಟೋಬರು—ನವೆಂಬರಾಗು ತ್ತದೆ, ಅದುವರೆಗೆ ಮೈಸೂರು ಸಂಸ್ಥಾನದಲ್ಲಿ ನಮ್ಮ ಅಂದಾಜಿನಲ್ಲಿ ಸುಮಾರು 50 ಲಕ್ಷ ಜನರಿಗೆ ಕೆಲಸ ದೊರಕಿಸಬೇಕು. ಸಾಧಾರಣವಾಗಿ ಮೇಜರ್ ಮತ್ತು ಮೈನರ್ ಇರಿಗೇಷನ್ ಕೆಲಸ, ರಸ್ತೆ ಕೆಲಸ ಇರುತ್ತದೆ, ಅದಕ್ಕೆ ಬಡ್ಜೆಟ್ಟಿನಲ್ಲಿ ಹಣ ಒದಗಿಸಿರುತ್ತದೆ, ಅದರಿಂದ ಕೆಲವರಿಗೆ ಕೆಲಸ ದೊರೆಯು ವುದಾದರೂ ವ್ಯವಸಾಯಗಾರರಿಗೆ 7-8 ಜಿಲ್ಲೆಗಳಲ್ಲಾದರೂ ಅಕ್ಟೋಬರ್‌ವರೆಗೆ ಮುಂದಿನ 7-8 ತಿಂಗಳವರೆಗೆ ಸರಕಾರ ಕೆಲಸ ಒದಗಿಸಬೇಕು. ಅದಕ್ಕೆ ತಕ್ಕ ವ್ಯವಸ್ಥೆಮಾಡಿದ್ದೇವೆ. ಆಹಾರದ ಕೊರತೆ ಎಷ್ಟಿದೆ, ಎಷ್ಟು ಬೇಕು ಎಂಬ ವಿವರಗಳನ್ನು ಆಹಾರ ಸಚಿವರು ಹೇಳಿರಬಹುದು ಅಥವಾ ಹೇಳುತ್ತಾರೆ. ನಮಗೆ ಒಂದು ಮಿಲಿಯನ್ ಟನ್ ಆಹಾರ ಬೇಕು. ಮೈಸೂರು ದೇಶದಲ್ಲಿ ಸುಮಾರು ನಾಲ್ಕು ಮಿಲಿಯನ್ ಟನ್ ಆಹಾರ ಬೆಳೆಯುವುದು. ಕೆಲಸವಿಲ್ಲದಿರುವವರಿಗೆ, ಮಳೆಯಿಲ್ಲದೆ ಜೀವನಕ್ಕಾಗಿ ತೊಂದರೆಗೀಡಾಗಿರುವ 50 ಲಕ್ಷ ಜನರಿಗೆ ಕೆಲಸ ಒದಗಿಸಬೇಕಾಗಿದೆ. ಅದನ್ನು ಕೇಂದ್ರ ಸರ್ಕಾರದವರಿಗೆ ಬರೆದಿದ್ದೇವೆ, ಕೇಂದ್ರಸರ್ಕಾರದಿಂದ ಪ್ಲಾನಿಂಗ್ ಕಮಿಷನ್ನಿನ ಅಡ್ವೈಸರ್ ಒಬ್ಬರು 9 ನೇ ತಾರೀಖು ಬರುತ್ತಾರೆ, ಈ ಸಂಸ್ಥಾನದಲ್ಲಿ ಅವರು ನಾಲ್ಕು ದಿವಸ ಇದ್ದು ಕೆಲವು ಪ್ರದೇಶಗಳನ್ನೆಲ್ಲಾ ನೋಡಿಕೊಂಡು ವಾಪಸು ಹೋಗಿ ತಿಳಿಸಿದ ಮೇಲೆ ಕೇಂದ್ರಸರ್ಕಾರದವರು ಏನು ಸಹಾಯ ಮಾಡುತ್ತಾರೆ ಎಂಬುದು ಗೊತ್ತಾಗುತ್ತದೆ. ಈಗಾಗಲೇ ಕೇಂದ್ರಸರ್ಕಾರದವರು ಒಂದು ಕೋಟಿ ರೂಪಾಯಿಗಳ ಅಡ್ವಾನ್ಸನ್ನು ಕೊಟ್ಟಿದ್ದಾರೆ. ಈ ಒಂದು ಕೋಟಿ ರೂಪಾಯಿ ಗಳನ್ನು ಇಟ್ಟುಕೊಂಡು—ಕೆಲಸ ಮಾಡುತ್ತೇವೆ. ಹಿಂದೆ ಫ್ಯಾಮಿನ್ ಬಂದಾಗ 64ರ ಫ್ಯಾಮಿನ್ ಎಂಬ ಹೆಡ್‌ನಲ್ಲಿ ರಸ್ತೆಗಳನ್ನು ಮಾಡಿಸುವುದು, ಗೋಕಟ್ಟೆಗಳನ್ನು ಮಾಡಿಸುವುದು ಈ ರೀತಿ ಟೆಸ್ಟ್ ರಿಲೀಫ್ ವರ್ಕ್ಸನ್ನು ತೆಗೆದುಕೊಳ್ಳುತ್ತಾ ಇದ್ದೆವು, ಈ ವರ್ಷ ಸಾಧ್ಯವಾದಷ್ಟೂ ಆ ಪ್ಯಾಟ್ರನ್ ಬೇರೆ ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಏಕೆಂದರೆ ಹಿಂದೆ ಕ್ಷಾಮ ಬಂದಾಗ ಹದಿನೈದು ದಿವಸ ತಿಂಗಳು ಮಾತ್ರ ಇರುತ್ತಾ ಇತ್ತು. ಗಣೇಶ ಚೌತಿ ಟೈಂನಲ್ಲಿ ಮಳೆ ಇಲ್ಲದೇ ಹೋಗುತ್ತಾ ಇತ್ತು ಮತ್ತೆ ಮಳೆ ಬಂದು ಬಿಡುತ್ತಾ ಇತ್ತು. ಇದುವರೆಗೂ ಆ ರೀತಿ ಒಂದು ಪರಿಸ್ಥಿತಿ ಇರುತ್ತಾ ಇತ್ತು. ಈ ವರ್ಷ ನಡೆಯಬೇಕಾದ ರಿಲೀಫ್ ವರ್ಕ್ ಆ ರೀತಿಯದಲ್ಲ. 6 ತಿಂಗಳಾದರೂ ನಡೆಯ ಬೇಕಾಗುತ್ತದೆ. ಆ ದೃಷ್ಟಿಯಿಂದ 64ರ ಫ್ಯಾಮಿನ್‌ನಲ್ಲಿ ತೆಗೆದುಕೊಂಡಂತೆ ಚಿಕ್ಕಪುಟ್ಟ ಕೆಲಸಗಳನ್ನು ತೆಗೆದುಕೊಳ್ಳುವುದನ್ನು ಬಿಟ್ಟು ನಾವು ಖರ್ಚು ಮಾಡುವ ಹಣ ಸಾಧ್ಯವಾದಷ್ಟೂ ಕೆರೆಗಳನ್ನು ಡೀಸಿಲ್ಟ್ ಮಾಡಿಸುವುದು ಕೆರೆಗಳನ್ನು ಕಟ್ಟಿ, ಕಾಲುವೆಗಳನ್ನು ಮಾಡಿಸುವುದು, ಕಿತ್ತುಹೋಗಿರುವ ಕೆರೆಗಳನ್ನು ದುರಸ್ತುಮಾಡಿಸುವುದು ಇಂತಹ ಕೆಲಸಗಳನ್ನು ಈ ಅಭಾವ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಅದರಿಂದ ಒಂದು ಆಸ್ತಿಯೂ ಕೂಡ ಜನಗಳಿಗೆ ಆಗಲಿ ಎಂಬ ಉದ್ದೇಶದಿಂದ ಹೆಚ್ಚು ಪ್ರಯೋಜನ ವಾಗುವಂತಹ ಕಾರ್ಯಗಳನ್ನು ಮಾಡಲು ಉದ್ದೇಶಿಸಿದ್ದೇವೆ. ಜಿಲ್ಲಾಧಿಕಾರಿಗಳಿಗೆ 30 ಲಕ್ಷ ರೂಪಾಯಿಗಳನ್ನು ಹಂಚಿದ್ದೇವೆ, ನಿನ್ನೆ ದಿವಸ ಮತ್ತೆ 30 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹೀಗೆ 60 ಲಕ್ಷ ರೂಪಾಯಿಗಳನ್ನು ತಾತ್ಕಾಲಿಕವಾಗಿ ಖರ್ಚು ಮಾಡುವುದಕ್ಕೆ ಕೊಟ್ಟಿದ್ದೇವೆ. ಇನ್ನು ಮುಂದೆ ಭಾರಿ ಪ್ರಮಾಣದಲ್ಲಿ ಮಾಡತಕ್ಕ ಇರಿಗೇಷನ್ ವರ್ಕ್ಸ್ ಎಂದರೆ ಬಾವಿ ಕೆಲಸಗಳು. ಬಾವಿಗಳು ಸಾಧಾರಣವಾಗಿ ರೈತರಿಗೆ ಕ್ಷಾಮ ಬಂದ ಪರಿಸ್ಥಿತಿಯಲ್ಲಿ ಆಧಾರವಾಗಿರುತ್ತವೆ. ಆದ್ದ ರಿಂದ ಸಾಧ್ಯವಾದಷ್ಟೂ ಹೆಚ್ಚು ಬಾವಿಗಳನ್ನು ತೆಗೆದುಕೊಳ್ಳಬೇಕೆಂದು ನಮ್ಮ ಇಲಾಖೆಯವರು ಈಗಾ ಗಲೇ ಒಂದು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಪೂರ್ತಿಯಾಗದೇ ಇರತಕ್ಕ ಬಾವಿಗಳನ್ನು ಪೂರ್ತಿ ಮಾಡಲು ಎಲ್ಲಾ ಜಿಲ್ಲೆಗಳಿಗೂ ಈ ಹಣವನ್ನು ಕೊಟ್ಟಿದ್ದೇವೆ. 1960ನೇ ಇಸವಿಯಲ್ಲಿ ಪ್ರಾರಂಭವಾದ ಲಿಬರಲೈಸೇಷನ್ ಸ್ಕೀಂನಲ್ಲಿ 3,000 ರೂಪಾಯಿಗಳನ್ನು ಒಂದು ಬಾವಿಗೆ ಖರ್ಚು ಮಾಡಬೇಕೆಂದು ಇತ್ತು. 3 ಪರ್ಸೆಂಟ್‌ನಂತೆ ಹಣ ಸಾಲ ಕೊಡುತ್ತಾ ಇದ್ದರು. 500 ರೂಪಾಯಿ ಸಬ್ಸಿಡಿ ಕೊಡುತ್ತಾ ಇದ್ದರು, ಈ ಪ್ರಕಾರ 45 ಸಾವಿರ ಬಾವಿಗಳನ್ನು ತೆಗೆದುಕೊಂಡಿ

(ಶ್ರೀ ಎಂ. ವಿ. ಕೃಷ್ಣಪ್ಪ)

ದ್ದೆವು. ಇದರಲ್ಲಿ ಅನೇಕ ಪೂರ್ತಿಯಾಗದೆ ಇದ್ದ ಬಾವಿಗಳು ಇದ್ದವು. ಸುಮಾರು 45 ಸಾವಿರ ಬಾವಿಗಳಲ್ಲಿ 14-15 ಸಾವಿರ ಇನ್‌ಕಂಪ್ಲೀಟೆಡ್ ಬಾವಿಗಳು ಯಾವವು ಇದ್ದವು ಅವುಗಳ ಕೆಲಸವನ್ನು ಪೂರ್ತಿಯಾಗದೇ ಇದ್ದದ್ದರಿಂದ ಡ್ಯೂ ಡೇಟ್ ಆಗಿ ಅವಕ್ಕೆ ಪೇಮೆಂಟ್ ಮಾಡಿರಲಿಲ್ಲ. ಈಗ 4-5 ವರ್ಷದಿಂದ ಎಷ್ಟು ಬಾವಿಗಳನ್ನು ತೆಗೆದಿದ್ದೇವೆಯೋ ಅವುಗಳನ್ನೆಲ್ಲಾ ಪೂರ್ತಿ ಮಾಡಬೇಕಾದ್ದು ಸರ್ಕಾರದವರ ಕರ್ತವ್ಯ. ಏಕೆಂದರೆ ಬಾವಿ ಸ್ಕೀಂನ್ನು ಕೋ ಆಪರೇಟೀವ್ ಡಿಪಾರ್ಟ್‌ಮೆಂಟಿಗೆ ಹ್ಯಾಂಡ್ ಓವರ್ ಮಾಡಿದ್ದೇವೆ. ಆದ್ದರಿಂದ ಹಿಂದೆ ಇದ್ದ ಕಾನೂನನ್ನು ಸಡಿಲ ಮಾಡಿ ಒಂದು ಆರ್ಡರ್ ಹೊರಡಿಸಿದ್ದೇವೆ. ಡೇಟ್ ಎಕ್ಸ್‌ಪೈರ್ ಆಗಿದ್ದರೂ ಕೂಡ ಅದನ್ನು ಪೂರ್ತಿ ಮಾಡಬೇಕೆಂದು ಒಂದು ಕೋಟಿ ರೂಪಾಯಿಗಳನ್ನು ಬಾವಿಗಳಿಗೆ ಕೊಟ್ಟಿದ್ದೇವೆ. ಮತ್ತೆ ಸುಮಾರು ಎರಡು ಕೋಟಿ ರೂಪಾಯಿಗಳನ್ನು ಲ್ಯಾಂಡ್ ಇಂಪ್ರೂವ್‌ಮೆಂಟ್ ಬ್ಯಾಂಕ್ ಮುಖಾಂತರ ಹಂಚಿಸುತ್ತಾ ಇದ್ದಾರೆ. ಸಾಧ್ಯವಾದಷ್ಟು ಕ್ಷಾಮ ಬಂದಾಗ ರೈತರಿಗೆ ಒಂದು ಆಸ್ತಿಯಾಗುವ ರೀತಿಯಲ್ಲಿ ಇರಬೇಕು ಮತ್ತು ಜನಗಳಿಗೂ ಕೂಡ ಕೆಲಸ ದೊರೆಯಬೇಕು ಈ ರೀತಿ ಕೆಲಸ ಮಾಡಬೇಕಾಗಿದೆ. ಈಗ 15 ಸಾವಿರ ಬಾವಿಗಳ ಕೆಲಸ ಪ್ರಾರಂಭವಾಗಿದೆ. ಒಂದೊಂದು ಬಾವಿ ಹತ್ತಿರ ಸುಮಾರು 20-25 ಜನ ಅದರೂ ಕೆಲಸ ಮಾಡುತ್ತಾರೆ. ನಾವು ರೈತರಿಗೆ ಮೂರು ಸಾವಿರ ರೂಪಾಯಿ ಸಾಲ ಕೊಟ್ಟರೆ ಅವರು ಇನ್ನು ಮೂರು ಸಾವಿರ ರೂಪಾಯಿಗಳನ್ನು ಒಡವೆ ವಸ್ತ್ರ ಮಾರಿ, ಸಾಲ ಸೋಲ ಮಾಡಿ ಅವರ ಕೈಯಿಂದ ಹಾಕಿ 7-8 ಸಾವಿರ ಜನಗಳಿಗೆ ಕೆಲಸ ಕಲ್ಪನೆ ಮಾಡುತ್ತಾರೆ ಎಂಬ ದೃಷ್ಟಿಯಿಂದ ಹಿಂದಿನ ರೂಲ್ ರಿಲ್ಯಾಕ್ಸ್ ಮಾಡಿ ಡೇಟ್ ಎಕ್ಸ್‌ಪೈರ್ ಆಗಿದ್ದರೂ ಕೂಡ ಪೂರ್ತಿಯಾಗದೇ ಇರತಕ್ಕ ಬಾವಿಗಳನ್ನು ಪೂರ್ತಿಮಾಡಬೇಕೆಂದು ಹೇಳಿ ಒಂದು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ.

ಇದು ಬಹಳ ಉದ್ದವಾದ ಅಭಾವ ಕೆಲಸವಾಗಿರುವುದರಿಂದ ಶಾಶ್ವತವಾದ ಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ಕೇಂದ್ರ ಸರ್ಕಾರದ ಒಬ್ಬ ಆಫೀಸರು ಬರುವವರು ಇದ್ದಾರೆ, ಕೇಂದ್ರ ಸರ್ಕಾರದವರೂ ಕೂಡ ತಮಗೂ ಗೊತ್ತಿರುವಂತೆ, ಪ್ರಪಂಚದ ಎಲ್ಲಾ ದೇಶಗಳಿಂದ ಸಹಾಯವನ್ನು ಪಡೆಯುತ್ತಾ ಇದ್ದಾರೆ. ಈ ಅಭಾವ ನಮ್ಮ ದೇಶದಲ್ಲ ಮಾತ್ರವಲ್ಲ, ಇನ್ನಿತರ 5-6 ಸಂಸ್ಥಾನಗಳಲ್ಲೂ ಕೂಡ ಇದೇ ಪರಿಸ್ಥಿತಿ ಇದೆ. ಈ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಕೇಂದ್ರ ಸರ್ಕಾರ ಪ್ರಪಂಚದ ಅನೇಕ ಸ್ನೇಹಿತ ಸರ್ಕಾರಗಳ ಸಹಾಯ ಪಡೆದು ಆಹಾರ, ಹಣ ಮತ್ತು ಎಲ್ಲಾ ವಿಧದಲ್ಲೂ - ಹಾಲಿನ ಪುಡಿ - ಮನುಷ್ಯನ ಆಹಾರವಲ್ಲದೇ, ಪಶುಗಳಿಗೂ ಕೂಡ ಆಹಾರ ಇಲ್ಲ ಬಹಳ ಪಶುಗಳು ಕಷ್ಟಪಡುತ್ತಾ ಇವೆ, ಅದಕ್ಕೆ ಆಹಾರ ಇಲ್ಲದೇ ಇದ್ದರೆ ಅವು ಹಾಲನ್ನು ಎಲ್ಲ ಕೊಡುತ್ತವೆ ? ಬೆಂಗಳೂರಿನಲ್ಲಿ ಹಾಲು ಇಲ್ಲ ಎನ್ನುತ್ತಾರೆ. ಕಾನಕಾನಹಳ್ಳಿಯಲ್ಲಿ ರಾಗಿ ಬೆಳೆ ಇಲ್ಲ, ಮಾಗಡಿಯಲ್ಲಿ ಬೆಳೆ ಹೋದರೆ ಅವುಗಳಿಗೆ ಆಹಾರ ಎಲ್ಲಿ ದೊರೆಯುತ್ತದೆ ? ಅವು ಹಾಲು ಕೊಡುವುದಾದರೂ ಹೇಗೆ ? ಇಂತಹ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರದಿಂದ ಬರತಕ್ಕ ಅಧಿಕಾರಿಗಳು ಅಲ್ಲೆಲ್ಲಾ ಹೋಗಿ ನೋಡಿಕೊಂಡು ಬಂದು ಅವರ ವರದಿಯನ್ನು ಕೊಡುವವರು ಇದ್ದಾರೆ. ಒಟ್ಟಿನಲ್ಲಿ ತಾತ್ಕಾಲಿಕವಾದ ಪರಿಹಾರವನ್ನು ಸೆಪ್ಟಂಬರ್ ಅಕ್ಟೋಬರ್ ನವೆಂಬರ್‌ನಲ್ಲಿ ಮಾತ್ರ ಮಾಡಿದ್ದೇವೆ. ಭಾರಿ ಕಾರ್ಯಕ್ರಮವನ್ನು ಮುಂದಿನ 6-7 ತಿಂಗಳುಗಳಿಗೆ ಹಾಕಬೇಕಾಗುವುದರಿಂದ ಅದನ್ನು ಪ್ರತಿಯೊಂದು ಜಿಲ್ಲಾ ಲೆವಲ್‌ಗೂ ಸಿದ್ಧಪಡಿಸಿದ್ದೇವೆ. ಆ ಪರಿಹಾರ ಕಾರ್ಯಕ್ರಮದಲ್ಲಿ ಹೆಚ್ಚು ಆಹಾರ ಬೆಳೆಯುವುದೇ ಪ್ರಾಧಾನ್ಯವಾಗಿದೆ. ಮಾನ್ಯ ಸದಸ್ಯರು ಈ ವಿಷಯದಲ್ಲೂ ಕೂಡ ಪೂರ್ತಿಯಾಗಿ ತಮ್ಮ ಸಹಕಾರವನ್ನು ಕೊಟ್ಟು ಮುಂದೆ ನಿಂತು, ಕೆಲಸ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಹಿಂದೆ ದೇಶದಲ್ಲ ಕ್ಷಾಮ ಬಂದರೆ ಸ್ವಲ್ಪ ಉತ್ಪ್ರೇಕ್ಷೆ ಇರುತ್ತಾ ಇತ್ತು. ಈ ವರ್ಷ ನಿಜವಾಗಿಯೂ ಉತ್ಪ್ರೇಕ್ಷೆ ಇಲ್ಲ, ನಿಜವಾಗಿಯೂ ಈ ಸಲ ಕರಡಿ ಬಂದಿದೆ. ಹಿಂದೆ 'ಕರಡಿ' 'ಕರಡಿ' ಬಂದು ಕೂಗುತ್ತಾ ಇದ್ದರು—

Mr. SPEAKER.—+ + +

Sri M. V. KRISHNAPPA.—+ + +

Sri K. LAKKAPPA.—+ + + + + +

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಹೆರಿಡಿಟರಿ ಅಬಾಲಿಷನ್ ಆಕ್ಟ್ ವಿಷಯದಲ್ಲಿ ಹೈಕೋರ್ಟ್ ಜಡ್ಜಮೆಂಟ್ ಬಂದಿದೆ ಎಂದು ಕೇಳುತ್ತೇವೆ. ವಿಲೇಜ್ ಆಫೀಸರ್ಸ್‌ಗೆ ಪರಿಹಾರ ಕೊಡುತ್ತೀರಾ ಎಂಬುದನ್ನು ಸ್ವಲ್ಪ ಹೇಳಿ ಸ್ವಾಮಿ.

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೂ ಇದಕ್ಕೂ ಅಷ್ಟಾಗಿ ಸಂಬಂಧ ಇಲ್ಲ, ಸಭೆ ಮುಗಿಯುವುದರೊಳಗೆ ತಮಗೆ ಬೇಕಾದರೆ ಆ ವಿಷಯ ಹೇಳುತ್ತೇನೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಪೂರ್ತಿಯಾಗದೇ ಇರುವ ಬಾವಿಗಳಿಗೆ ದುಡ್ಡು ಕೊಡುತ್ತೇವೆ ಎಂದು ಹೇಳುತ್ತಾ ಇದ್ದೀರಿ. ಬಾವಿ ತೆಗೆದು ಮಣ್ಣು ಕುಸಿದು ಹೋಗಿದೆ ಅಂಥಾದ್ದಕ್ಕೂ ಕೂಡ ಯಾವ ವ್ಯವಸ್ಥೆ ಮಾಡಿದ್ದೀರಿ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಾವಿ ತೆಗೆದಾಗ ಬಂಡೆ ಬಿದ್ದಿರುತ್ತದೆ. ಆದ್ದರಿಂದ ಇಂಡಿವಿಜ್ಯುಯಲ್ ಕೇಸ್‌ನಲ್ಲಿ ಕೆಲವರಿಗೆ ಸಹಾಯ ಮಾಡಬಹುದು ಎಂದು ಒಂದು ತೀರ್ಮಾನ ಮಾಡಿಕೊಂಡಿದ್ದೇವೆ.

4-30. P.M.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ). - ಮಾನ್ಯ ಸಭಾಪತಿಗಳವರೇ, ಸರಕಾರದವರು ರಾಜ್ಯಪಾಲರವರ ಮೂಲಕ ಓದಿಸಿದಂಥ ಭಾಷಣವನ್ನು ಪ್ರಸ್ತಾಪ ಮಾಡುತ್ತಾ ಸರಕಾರಕ್ಕೆ ಕೆಲವು ಸಲಹೆಗಳನ್ನು ಕೊಡಲು ನಾನು ಇಚ್ಛೆಪಡುತ್ತೇನೆ. ರಾಜ್ಯಪಾಲರವರು ನಮೂದಿಸದೆ ಇರತಕ್ಕಂಥ ಕೆಲವು ವಿಚಾರಗಳ ಬಗ್ಗೆ ಕಂದಾಯ ಮಂತ್ರಿಗಳು ಮಾತನಾಡುತ್ತಾ ತಮ್ಮ ಖಾತೆಗೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಅಂದರೆ, ಕಂದಾಯ ಮಾಫಿ ಮಾಡತಕ್ಕ ವಿಚಾರ ಹೇಳಿದರು. ಹೊಟ್ಟೆಗೆ ಅನ್ನ ಒದಗಿನ ತಕ್ಕಂಥಾದ್ದು ಈ ಸಂದರ್ಭದಲ್ಲಿ ಪ್ರಾಮುಖ್ಯವಾಗಿ ಸರಕಾರದ ಕರ್ತವ್ಯವಾಗಿತ್ತು. ಈ ವರ್ಷ ನಾಲ್ಕು ಆಣೆಗಿಂತ ಕಡಿಮೆ ಬೆಳೆಯಾದ ಪ್ರದೇಶದಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಕಂದಾಯ ವಸೂಲಿ ವಜಾ ಮಾಡತಕ್ಕ ಕಾರ್ಯ ಸರಕಾರ ಮಾಡಬೇಕಾಗಿತ್ತು. ಅದು ಇಲ್ಲದೇನೇ ಕಂದಾಯ ವಸೂಲು ಮಾಡುವುದು ಬೇಕಾಗಿಲ್ಲ, ಅದನ್ನು ಸಸ್ಪೆನ್‌ಷನ್ ಮಾಡಿ ಮುಂದಿನ ವರ್ಷ ವಸೂಲು ಮಾಡಬೇಕೆಂಬ ನೀತಿ ಸರಕಾರ ಹೊಂದಿದೆ. ಇದೊಂದು ತಪ್ಪು ಹೆಜ್ಜೆ ಸರ್ಕಾರ ಇಡುತ್ತಿದೆ. ಇದರಿಂದ ರೈತನನ್ನು ಕಷ್ಟಕ್ಕೆ ಈಡು ಮಾಡಿದಂತಾಗುತ್ತದೆ. ಈಗಲಾದರೂ ವಿಮರ್ಶಾತ್ಮಕ ದೃಷ್ಟಿಯಿಂದ ವಿಚಾರಮಾಡಿ ನಾಲ್ಕಾಣೆಕ್ಕಿಂತ ಕಡಿಮೆ ಫಸಲು ಆಗಿರತಕ್ಕಂಥ ಎಲ್ಲಾ ಕಡೆ ಕಂದಾಯ ವಜಾ ಮಾಡತಕ್ಕ ನೀತಿ ಸರಕಾರ ಅನುಸರಿಸಬೇಕು ಎಂದು ಈ ಸಂದರ್ಭದಲ್ಲಿ ಸರಕಾರಕ್ಕೆ ಎಚ್ಚರಿಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಬಾವಿ ವಿಚಾರದಲ್ಲಿ ಕಂದಾಯ ಮಂತ್ರಿಗಳು ಹೇಳಿದರು. 1961 ನೇ ಇಸವಿಯಿಂದ ಪ್ರಾರಂಭ ಮಾಡಿದ ಬಾವಿಗಳನ್ನು ಮಾರ್ಚಿ 31 ನೇ ತಾರೀಖಿನೊಳಗಾಗಿ ಪೂರೈಸಿದರೆ ಹಣವನ್ನು ಕೊಡುತ್ತೇವೆ ಮತ್ತು ಆ ರೀತಿ ಸರಕಾರ ಆರ್ಡರ್ ಕಳಿಸಿದೆ ಎಂದು ಹೇಳಿದರು. ಎಲ್ಲರಿಗೂ ಬಾವಿ ತೆಗೆಯುವುದು ಇಷ್ಟು ಸ್ವಲ್ಪ ಕಾಲಾವಕಾಶದಲ್ಲಿ ತೊಂದರೆಯಾಗುತ್ತದೆ. ನಾನು ಒಂದು ಸೂಚನೆ ಮಾಡಲು ಇಷ್ಟಪಡುತ್ತೇನೆ. ಇನ್ನೂ ಮೂರು ತಿಂಗಳು ಹೆಚ್ಚು ಕಾಲಾವಕಾಶ ಕೊಡಬೇಕು. ಅಂದರೆ ಜೂನ್ ಅಂತ್ಯದ ವರೆಗೆ ಕಾಲಾವಕಾಶ ಹೆಚ್ಚು ಮಾಡಬೇಕು ತನ್ಮೂಲಕ ಹದಿನೈದು ಸಾವಿರ ಬಾವಿ ಪ್ರಾರಂಭ ಮಾಡಿರುವುದನ್ನು ಪೂರೈಸುವಂತೆ ಕೆಲಸಕ್ಕೆ ಕೈಹಾಕುವ ರೀತಿಯಲ್ಲಿ ಮಾಡಬೇಕು ಎಂದು ಸಲಹೆ ಮಾಡುತ್ತೇನೆ.

ಇನ್ನು ಆಹಾರ ವಿಚಾರದಲ್ಲಿ ಒಂದು ಆಡ್ ಹಾಕ್ ಬೇಸಿಸ್‌ಮೇಲೆ ಎಲ್ಲ ಹಳ್ಳಿಗಳಲ್ಲಿ ಧಾನ್ಯ ಹಂಚುತ್ತೇವೆಂದು ಮಾನ್ಯ ಆಹಾರ ಮಂತ್ರಿಗಳು ಹೇಳಿದರು. ನಾನು ಕೂಡ ಒಂದು ಪ್ರಶ್ನೆ ಮಾಡುತ್ತೇನೆ. ಪಂಚಾಯತಿ ಸರಹದ್ದಿನಲ್ಲಿ ಎರಡು ಸಾವಿರ ಜನಸಂಖ್ಯೆ ಇರುವಲ್ಲಿ ಸುಮಾರು ಎರಡು ಕ್ವಿಂಟಾಲ್ ಮೂರು ಕ್ವಿಂಟಾಲ್ ಧಾನ್ಯ 15 ದಿವಸಕ್ಕೆ ಕೊಟ್ಟರೆ ಆಹಾರ ಒದಗಿಸಿದ ಹಾಗೆ ಆಗುತ್ತದೆಯೇ ? ಆಹಾರ ಒದಗಿಸುತ್ತೇವೆ ಎಂಬ ಸೋಗಿನಲ್ಲಿ ನಾಟಕವಾಡುತ್ತಿದ್ದೀರಿ. ಇಂಥ ನಾಟಕ ಆಡುವುದನ್ನು ಬಿಟ್ಟು ಬಿಡಬೇಕು. ಕೊನೆಯ ಪಕ್ಷ ಒಪ್ಪತ್ತು ಊಟ ಮಾಡಿ ಜೀವಿಸುವಂತೆ ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸರಕಾರಕ್ಕೆ ಸೂಚನೆ ಮಾಡಲು ಇಷ್ಟಪಡುತ್ತೇನೆ. ಹೆಚ್ಚು ಆಹಾರ ಬೆಳೆಸಬೇಕು ಎಂದು ಸರಕಾರದ ಎಲ್ಲ ಮಂತ್ರಿಗಳೂ ಹೇಳುತ್ತಲೇ ಇದ್ದಾರೆ. ಬರೀ ಭಾಷಣದಲ್ಲಿ ಇದು ಆಗುತ್ತಿದೆ. ರೈತ ವ್ಯವಸಾಯ ಮಾಡುತ್ತಾನೆ, ಆಹಾರ ಬೆಳೆಯುತ್ತಾನೆ. ಅವನಿಗೆ ವಿದ್ಯುತ್‌ಶಕ್ತಿ ಒದಗಿಸಬೇಕು ಎಂದು ಕೇಳಿದಾಗ್ಗೆ ವಿದ್ಯುತ್‌ಶಕ್ತಿ ಮಂಡಲಿಯು ಹಿಂದು ಮುಂದೆ ನೋಡಿ ವರ್ಷಗಟ್ಟಲೆ ವಿದ್ಯುತ್ ಶಕ್ತಿ ಒದಗಿಸದೆ ಇರತಕ್ಕಂಥ ಪರಿಸ್ಥಿತಿ ಇದೆ. ಆದುದರಿಂದ ರೈತನಿಗೆ ವಿದ್ಯುತ್‌ಶಕ್ತಿ ಆದಷ್ಟು ಜಾಗ್ರತೆ ಒದಗಿಸುವ ಏರ್ಪಾಡು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸ್ವಾಮಿ, ನಮ್ಮ ತಾಲ್ಲೂಕಿನ ಬಗ್ಗೆ ಎರಡು ಮಾತು ಹೇಳುತ್ತೇನೆ. ಹಣ ಕಾಸಿನ ಮಂತ್ರಿಗಳಾದ ಮಾನ್ಯ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಪಿ. ಡಬ್ಲ್ಯೂ. ಡಿ. ಮಂತ್ರಿಗಳಾದ ಮಾನ್ಯ ಶ್ರೀ ವೀರೇಂದ್ರ ಪಾಟೀಲ್‌ರವರು ನಮ್ಮ ಜಿಲ್ಲೆಗೆ ಬಂದಾಗ್ಗೆ ಆಶ್ವಾಸನೆ ಕೊಟ್ಟು ಬಂದಿದ್ದಾರೆ. ಕೆಲಸ ಕಾರ್ಯಗಳನ್ನು ಆದಷ್ಟು ತೀವ್ರ ತೆಗೆದುಕೊಳ್ಳುತ್ತೇವೆಂದು ಹೇಳಿ ಬಂದರೂ ಕೂಡ ಇಲ್ಲಿಯ ವರೆಗೆ ಯಾವ ನೆರವನ್ನೂ ಕೊಟ್ಟಿಲ್ಲ ಮತ್ತು ಕೆಲಸ ಪ್ರಾರಂಭ ಮಾಡದೇ ಇರುವುದು ಬಹಳ

(ಶ್ರೀ ಬಿ. ಬೈರಪ್ಪಾಜಿ)

ಶೋಚನೀಯವಾದುದು. ಮಾನ್ಯ ಮಂತ್ರಿಗಳವರು ಕೊಟ್ಟಂಥ ಮಾತನ್ನು ಉಳಿಸಿಕೊಳ್ಳುವುದಕ್ಕಾದರೂ ಕೆಲಸ ಪ್ರಾರಂಭ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಅಧ್ಯಕ್ಷರಿಗೆ, ಈ ಸಭೆಯ ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಕ್ಕೆ ನಾನು ಇಚ್ಛೆಪಡೆದ ಕೇವಲ ಒಂದೆರಡು ವಿಚಾರಗಳನ್ನು ಮಾತ್ರ ಪ್ರಸ್ತಾಪಿಸುತ್ತೇನೆ.

ಆಹಾರದ ವಿಚಾರದಲ್ಲಿ ಇಡೀ ದೇಶಕ್ಕೆ ಅನ್ವಯಿಸತಕ್ಕ ಒಂದು ನಿರ್ದಿಷ್ಟವಾದ ನೀತಿಯನ್ನು ರೂಪಿಸುವ ಕಾಲ ಸನ್ನಿಹಿತವಾಗಿದೆ. ಅಂತೆಯೇ ನಮ್ಮ ಯೊಜನೆಗಳಲ್ಲಿ ಏನೇನು ನ್ಯೂನತೆಗಳಿವೆ ಮತ್ತು ಈ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ವಿಚಾರದಲ್ಲಿ ಏನೇನು ನ್ಯೂನತೆಗಳಿವೆ, ರೈತಾಪಿ ಜನರ ಕಷ್ಟವೇನೆಂಬುದನ್ನು ತಿಳಿದುಕೊಳ್ಳುವುದಕ್ಕೆ ಆಡಳಿತಗಾರರು ಪ್ರಯತ್ನಮಾಡುವುದು ಅಗತ್ಯವೆಂದು ನಾನು ಅರಿಕೆಮಾಡಿಕೊಳ್ಳುತ್ತೇನೆ. ಸರ್ಕಾರದ ಸಾಧ್ಯತೆಯನ್ನು ನಾನು ಪ್ರಶ್ನಿಸುವುದಿಲ್ಲ. ಆದರೆ ತಜ್ಞರಲ್ಲಿ ಕೆಲವರು ಮತ್ತು ಅಧಿಕಾರಿಗಳಲ್ಲಿ ಹಲವರು ಈ ರೈತಾಪಿ ಜನರ ಕಷ್ಟಗಳನ್ನು ಚೆನ್ನಾಗಿ ಅರಿತುಕೊಂಡಿಲ್ಲವೆಂದು ಹೇಳಿದರೆ ತಪ್ಪಾಗುವುದಿಲ್ಲವೆಂದು ನನಗನ್ನಿಸುತ್ತದೆ. ಕಳೆದ 15 ವರ್ಷಗಳಿಂದ ಆಹಾರ ವಿಚಾರದಲ್ಲಿ ಸ್ವಾವಲಂಬನ ನೀತಿಯನ್ನು ಅನುಸರಿಸಿಕೊಂಡು ಬರುತ್ತಾ ಇರುವುದರಲ್ಲಿ ಸರ್ವ ಪ್ರಯತ್ನಗಳನ್ನು ಮಾಡುತ್ತಾ ಇದ್ದೇವೆ. ಆದರೆ ಅದರಲ್ಲಿ ನಮ್ಮ ಪ್ರಯತ್ನ ಸಾಕಾದಷ್ಟು ಸಫಲವಾಗಲಿಲ್ಲ. ಅದಕ್ಕೆ ಕಾರಣವೇನೆಂಬುದನ್ನು ನಾವು ತಿಳಿದುಕೊಂಡು ಪರಿಣಾಮಕಾರಿಯಾದ ಯೋಜನೆಯನ್ನು ಹಾಕಿದರೆ ಮಾತ್ರ ಈ ದೇಶದಲ್ಲಿ ಜನರಿಗೆ ತೃಪ್ತಿಕರವಾದ ಆಹಾರವನ್ನು ಒದಗಿಸತಕ್ಕ ಕೆಲಸ ಸುಲಭವಾಗಬಹುದು. ಅದಕ್ಕಾಗಿ ಬೇಕಾದಷ್ಟು ಹಣವನ್ನು ಖರ್ಚುಮಾಡುತ್ತಿದ್ದೇವೆ. ಅದರಲ್ಲಿ ಎಷ್ಟು ಭಾಗ ಹೆಚ್ಚಿಗೆ ಬೆಳೆ ಬೆಳೆಯುವ ಕಾರ್ಯಕ್ಕೆ ಖರ್ಚಾಗುತ್ತದೆಂಬುದನ್ನೂ ಕೂಡ ತಿಳಿದುಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನಮಾಡಬೇಕು. ಮಾನ್ಯ ಶ್ರೀ ಜತ್ತಿಯವರು ಮನಾಪಲಿ ಪ್ರೊಕ್ಯೂರ್‌ಮೆಂಟ್ ಜಾರಿಗೆ ತರತಕ್ಕ ಪ್ರಯತ್ನದಲ್ಲಿದ್ದೇವೆ ಎಂಬುದಾಗಿ ಹೇಳಿದರು. ಯಾವ ನೀತಿಯನ್ನು ಇವರು ಅನುಸರಿಸಿದರೂ ಕೂಡ ಇಡೀ ದೇಶಕ್ಕೆಲ್ಲಾ ಅನ್ವಯಿಸತಕ್ಕ ನೀತಿಯಾಗಿರಬೇಕು. ಮನಾಪಲಿ ಪ್ರೊಕ್ಯೂರ್‌ಮೆಂಟ್ ಜಾರಿಗೆ ಬಂದರೂ ಕೂಡ ಆಹಾರಪದಾರ್ಥಗಳನ್ನು ಬೆಳೆಯುವ ಜನರಿಗೆ ಸಾಕಾದಷ್ಟು ಉತ್ತೇಜನವಿರಬೇಕು. ಹೆಚ್ಚಿಗೆ ನೀರಾವರಿ ಪ್ರದೇಶ ಇರತಕ್ಕದ್ದಾಗಿದೆಯೇ ವಿನಾ ಅನೇಕ ಜಾಗದಲ್ಲಿ ಆಹಾರವನ್ನು ಬೆಳೆಯತಕ್ಕ ಉದ್ಯಮ ಸಾಕಷ್ಟು ಆಗಿಯೇ ಇಲ್ಲ. ಇದರ ಉತ್ತಮ ಸಾಧನೆಯನ್ನು ಹೋಲಿಸಿ ನೋಡಿದರೆ ಏನೂ ಲಾಭದಾಯಕವಾಗಿಲ್ಲ. ಆ ರೀತಿ ಹೆಚ್ಚು ಲಾಭದಾಯಕವಾಗಿಲ್ಲ ಎನ್ನುವುದಕ್ಕೆ ಕಾರಣ ಹೆಚ್ಚು ಬೆಳೆ ಬೆಳೆಯುವ ಯೋಜನೆ ಯಶಸ್ವಿಯಾಗದೇ ಇರುವುದೇ ಆಗಿದೆ. ಮನಾಪಲಿ ಪ್ರೊಕ್ಯೂರ್‌ಮೆಂಟ್ ಜಾರಿಗೆ ಬಂದನಂತರ ಬೆಳೆಯುವವರಿಗೆ ಈಗ ಕೊಡುವಂತೆ ಕ್ವಿಂಟಾಲಿಗೆ 45 ರೂಪಾಯಿಗಳಂತೆ ಕೊಟ್ಟರೆ ಅದರಿಂದ ನಮ್ಮ ಉದ್ದೇಶ ಸಾರ್ಥಕವಾಗುವುದಿಲ್ಲವೆಂದು ನಾನು ಮಾನ್ಯ ಶ್ರೀ ಜತ್ತಿಯವರಿಗೆ ಮತ್ತು ಸರ್ಕಾರದವರಿಗೆ ಮನವಿ ಮಾಡಿಕೊಳ್ಳುತ್ತೇನೆ. ಈಗ ಅಮೆರಿಕಾದೇಶದಲ್ಲಿ ಒಂದು ಕ್ವಿಂಟಾಲಿಗೆ 75 ರೂಪಾಯಿಗಳಷ್ಟು ದರ ಇದೆ. ಆ ರೀತಿ ಪ್ರೊಕ್ಯೂರ್‌ಮೆಂಟ್ ಪ್ರೈಸನ್ನು ಆ ಸರ್ಕಾರ ಕೊಟ್ಟಿದ್ದಾರೆ. ಆದರೆ ಇಲ್ಲಿ ಬೆಳೆದ ದವಸ ಧಾನ್ಯಗಳನ್ನು ಸರ್ಕಾರಕ್ಕೆ ಕ್ವಿಂಟಾಲಿಗೆ 43 ಅಥವಾ 45 ರೂಪಾಯಿಗಳ ಪ್ರಕಾರ ರೈತರಿಗೆ ಕೊಟ್ಟರೆ ಅದಕ್ಕಿಂತ ಅಪಾಯಕಾರಿಯಾದ ನೀತಿ ಇನ್ನಾವುದೂ ಇಲ್ಲವೆಂದು ನಾನು ಈಗಲೇ ಸರ್ಕಾರಕ್ಕೆ ಎಚ್ಚರಿಕೆ ಕೊಡಬಯಸುತ್ತೇನೆ. ಆಹಾರದ ವಿಷಯದಲ್ಲಿ ಸರ್ವರ ಸಹಾನುಭೂತಿ ಸರ್ಕಾರಕ್ಕೆ ಇರುವುದು ಅಗತ್ಯ. ಆದರೆ ಈ ವಿಚಾರದಲ್ಲಿ ಅಲ್ಲಲ್ಲಿ ಆಗತಕ್ಕ ಕಿರುಕುಳವನ್ನು ತಡೆಗಟ್ಟುವುದು ಸರ್ಕಾರದ್ದು ಆಗಿವೆ. ಊರೆ ದವಸಗಳ ಸಂಗ್ರಹಣ ಕಾರ್ಯಕ್ಕೆ ರೈತರು ಸರ್ಕಾರಕ್ಕೆ ನೆರವನ್ನು ಹೆಚ್ಚಿಗೆ ಕೊಡಬೇಕು. ಆದರೆ ರಾಜ್ಯದ ಅನೇಕ ಕಡೆಗಳಿಂದ ಬರತಕ್ಕ ವರದಿಗಳನ್ನು ನೋಡಿದರೆ ಈ ವಿಚಾರದಲ್ಲಿ ಅಧಿಕಾರಿಗಳ ಕಿರುಕುಳ ಹೆಚ್ಚಾಗಿದೆ. ಆಹಾರ ಸಂಗ್ರಹಣ ಕೆಲಸದಲ್ಲಿಯೂ ಹೆಚ್ಚಿಗೆ ರೈತರಿಗೆ ಕಿರುಕುಳವನ್ನು ಅಧಿಕಾರಿಗಳು ಕೊಡುತ್ತಿರುವುದು ನಿಲ್ಲಬೇಕೆಂಬುದಾಗಿ ನಾನು ಮನವಿಮಾಡಿಕೊಳ್ಳುತ್ತೇನೆ.

ಇನ್ನು ಕಂದಾಯದ ಮೇಲೆ ಸರ್‌ಚಾರ್ಜನ್ನು ಹಾಕಬೇಕೆಂದು ಒಂದು ವಿಧೇಯಕವನ್ನು ಮಂಡಿಸಿದ್ದಾರೆ. ಈಗಾಗಲೇ ರೈತರಮೇಲೆ ದಿನೇದಿನೇ ತೆರಿಗೆಯ ಹೊರೆ ಹೆಚ್ಚಾಗುತ್ತಾ ಇದೆ. ಪುನರ್ವಿಮರ್ಶೆಯಾದ ಕಂದಾಯವೇ ಜಾಸ್ತಿಯಾಗಿದೆ. ಈಗ ಅದಕ್ಕೆರಡರಷ್ಟು ಕಂದಾಯ ಹಾಕುವುದೆಂದರೆ ನನಗಂತೂ ಅರ್ಥವಾಗುವುದಿಲ್ಲ. ಸರ್ಕಾರದವರು ಇದನ್ನು ಕೂಲಂಕಷವಾಗಿ ವಿಚಾರ ಮಾಡಲಿಲ್ಲವೆಂದು ನಾನು ಹೇಳಿದರೆ ಅವರು ನನ್ನ ವಿಚಾರದಲ್ಲಿ ಅನ್ಯಥಾ ಭಾವಿಸಬಾರದು ನಾನು.

ಯಾವ ಒಂದು ದುರುದ್ದೇಶದಿಂದಲೂ ಇಲ್ಲಿ ಮಾತನಾಡುತ್ತಿಲ್ಲ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಮತ್ತೊಂದು ಸಾರಿ ಪುನರ್ವಿಮರ್ಶೆಮಾಡಬೇಕಾದುದು ಅಗತ್ಯವೆಂದು ನಾನು ಅವರಲ್ಲಿ ಮನವಿ ಮಾಡುತ್ತೇನೆ.

ಇನ್ನು ರಾಜ್ಯದ ಆದಾಯ ಮತ್ತು ಖರ್ಚುಗಳ ವಿಚಾರದಲ್ಲಿ ಕೂಲಂಕಷವಾಗಿ ಸರ್ಕಾರದವರು ವಿಮರ್ಶೆಮಾಡುವುದು ಅಗತ್ಯವಿದೆ. ಹೊಸ ತೆರಿಗೆಗಳನ್ನು ಹುಡುಕುವಬದಲು ವೆಚ್ಚವನ್ನು ಕಡಿಮೆ ಮಾಡತಕ್ಕ ಹಾದಿಯನ್ನು ಹುಡುಕುವುದು ಬಹಳ ಅಗತ್ಯವಿದೆ. ಆ ರೀತಿ ಮಾಡುವುದಕ್ಕೆ ಮಾತ್ರ ಸಾಧ್ಯವಿದೆ. ಅದನ್ನು ಒಂದು ವೇಳೆ ಈಗಿರತಕ್ಕ ತೆರಿಗೆ ಹೊರೆ ಹೆಚ್ಚಿದರೆ ಜೀವನದಲ್ಲ ಕಷ್ಟಕಾರ್ಪಣ್ಯಗಳು ಹೆಚ್ಚಾಗುತ್ತಾ ಹೋಗುತ್ತವೆ. ಆದ್ದರಿಂದ ಕೂಲಂಕಷವಾಗಿ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ವಿಮರ್ಶೆಮಾಡಿ ಆಡಳಿತದ ವೆಚ್ಚವನ್ನು ಆದಷ್ಟು ಕಡಿಮೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಈಗ ನಮ್ಮ ಯೋಜನೆಗಳು ನಿಜವಾಗಿ ಯಶಸ್ವಿಯಾಗಬೇಕಾದರೆ ಆಡಳಿತದಲ್ಲಿ ದರ್ಪ ಮತ್ತು ಬಿಗಿ ಹೆಚ್ಚಬೇಕು, ಖರ್ಚಾದ ಹಣ ಸದುಪಯೋಗವಾಗಬೇಕು. ಆ ರೀತಿಯಾಗಿ ಸರ್ಕಾರದವರು ಮಾಡುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು 2).—ಮಾನ್ಯ ಅಧ್ಯಕ್ಷರೇ, ಈ ರಾಜ್ಯಪಾಲರ ಭಾಷಣಕ್ಕೆ ನಾನು ವಿರೋಧವನ್ನು ವ್ಯಕ್ತಪಡಿಸಿ ಆ ಬಗ್ಗೆ ಒಂದೆರಡು ಸೂಚನೆಗಳನ್ನು ಕೊಡಬಯಸುತ್ತೇನೆ. ಅವರು ಮೊಟ್ಟಮೊದಲನೆಯದಾಗಿ ನಮ್ಮ ಪ್ರಧಾನ ಮಂತ್ರಿಗಳ ಆಯ್ಕೆ ನಡೆದಿರುವುದು ಭಾರತ ಪ್ರಜಾಪ್ರಭುತ್ವದ ಪರಿಪಕ್ವತೆಗೂ, ಸತ್ತ್ವಸಾರಕ್ಕೂ ಯಥೇಷ್ಟ ನಿದರ್ಶನವಾಗಿದೆ ಎಂದು ಎರಡನೆಯ ಪುಟದಲ್ಲಿ ಹೇಳಿದ್ದಾರೆ. ಇದು ನನಗೆ ಸರಿಯೆಂದು ಕಾಣುವುದಿಲ್ಲ. ಏಕೆಂದರೆ 16 ವರ್ಷಗಳ ಕಾಲ ನೆಹರೂ ಅವರ ಎದುರಾಗಿ ಯಾರೂ ಹೋಗದೆ ಇರುವ ಹಾಗೆ ನೆಹರೂ ಅವರು ಇಂಡಿಯಾ ದೇಶವನ್ನು ಆಳಿದ್ದಾರೆ. ಆ ಮೇಲೆ ಅವಿರೋಧವಾಗಿ ಆಯ್ಕೆಯಾಗಿ 18 ತಿಂಗಳುಗಳ ಕಾಲ ಶಾಸ್ತ್ರಿಗಳು ನಮ್ಮ ದೇಶವನ್ನು ಆಳಿದ್ದಾರೆ. ಈಗ ನಮ್ಮ ಪ್ರಧಾನ ಮಂತ್ರಿಗಳು ಒಂದು ಪಾರ್ಟಿಯೊಳಗೆ ಚುನಾವಣೆಯಾಗಿ ಆರಿಸಿಬಂದಿದ್ದಾರೆ, ಅದು ಭಾರತದ ಪ್ರಜಾಪ್ರಭುತ್ವದ ಪರಿಪಕ್ವತೆಗೂ, ಸತ್ತ್ವಸಾರಕ್ಕೂ ಯಥೇಷ್ಟ ನಿದರ್ಶನವಾಗಿದೆಯೆಂದು ಇಲ್ಲಿ ಹೇಳುವುದು ನಿಜವಾಗಿ ಸರಿಯೇ, ಅದು ಹಾಗೆ ಕಾಣಿಸುತ್ತದೆಯೇ ಎಂಬುದನ್ನು ನಾನು ಕೇಳುತ್ತೇನೆ. ಏಕೆಂದರೆ ಪ್ರಜಾಪ್ರಭುತ್ವದ ಪರಿಪಕ್ವತೆಗೆ ವಿರೋಧ ಪಕ್ಷದವರನ್ನು ಸರಿಹೊಂದಿಸಿಕೊಂಡು ಹೋಗಬೇಕಾದುದು ಮುಖ್ಯ. ಈಗಿರತಕ್ಕ ವಿರೋಧ ಪಕ್ಷದವರು ಕೊಡತಕ್ಕ ರಚನಾತ್ಮಕವಾದ ಸಲಹೆಗಳು ಕಾರ್ಯ ರೂಪದಲ್ಲಿ ನಡೆದುಕೊಂಡು ಬರುವಂತೆ ಈ ತುರ್ತು ಪರಿಸ್ಥಿತಿಯಲ್ಲಿ ತಕ್ಕ ಕ್ರಮಗಳನ್ನು ತೆಗೆದುಕೊಂಡು ರಾಜ್ಯವನ್ನು ಆಳದೆ ಡಿ. ಐ. ಆರ್. ಎಂಬ ನಿಯಮವನ್ನು ಎತ್ತಿ ಜನತೆಯಲ್ಲಿ ಅದು ಈಗಿನ ಒಂದು ಪ್ರಜಾಪ್ರಭುತ್ವದಲ್ಲಿ ಬಹು ಮುಖ್ಯ ಎಂಬ ವಿಷಯವನ್ನು ಎಲ್ಲರಿಗೂ ತಿಳಿಯುವಂತೆ ಮಾಡಿ ಈ ರಾಜ್ಯವನ್ನು ಆಳಿದರೆ ಅದು ಸರಿಯೇ, ಅದು ನಿಜವಾಗಿ ಪ್ರಜಾಪ್ರಭುತ್ವದ ಪರಿಪಕ್ವತೆಗೂ ಮತ್ತು ಸತ್ವಸಾರಕ್ಕೂ ಸರಿಹೊಂದಿಕೊಳ್ಳುತ್ತದೆಯೇ ಎಂದು ನಾನು ಕೇಳುತ್ತೇನೆ. ನೆಹರೂ ಅವರು ಪಾರ್ಟಿಯಲ್ಲಿ ಅವಿರೋಧವಾಗಿ ಆರಿಸಿ ಬಂದು 16 ವರ್ಷಗಳ ಕಾಲ ಇಡೀ ಇಂಡಿಯಾ ದೇಶವನ್ನು ಆಳಿದರು. ಒಬ್ಬರೇ ಅಷ್ಟು ವರ್ಷಗಳ ಕಾಲ ಪ್ರಧಾನಮಂತ್ರಿಗಳಾಗಿದ್ದರು. ಆದರೆ ಪ್ರಧಾನ ಮಂತ್ರಿಗಳು ಒಂದು ಪಕ್ಷದಲ್ಲಿ ಚುನಾವಣೆಯಾಗಿ ಆರಿಸಿ ಬಂದಿದ್ದಾರೆ. ಇವರು ವಿರೋಧ ಪಕ್ಷಗಳೊಡನೆ ಹೊಂದಿಕೊಂಡು ಹೋಗುತ್ತಾರೆಯೆ ಎಂಬುದನ್ನು ನೋಡಬೇಕಾಗಿದೆ.

ಇನ್ನು ಯೋಜನೆಗಳ ವಿಚಾರ. ರಾಜ್ಯಪಾಲರ ಈ ಯೋಜನೆಗಳ ಕಾರ್ಯಗಳು ನಿಜವಾಗಿ ಈ ರಾಜ್ಯದಲ್ಲಿ ಹಾಲ್ಜೇನು ಹರಿಯುವ ಹಾಗೆ ಮುಂದುವರಿಯುತ್ತವೆ ಎಂಬುದಾಗಿ ಹೇಳಿದ್ದಾರೆ. ಆದರೆ ನಾನು ಬಡ ಜನರ ಕಣ್ಣೀರು ಹೊಳೆಯಾಗಿ ಹರಿಯುತ್ತದೆಂದು ಇಲ್ಲಿ ಹೇಳಬೇಕಾಗಿದೆ. ಇವರು ಮಾಡತಕ್ಕ ಯೋಜನೆಗಳಲ್ಲಿ ಏನಾಗಿದೆಯೆಂದರೆ, ಎಲ್ಲೋ ಕೆಲವು ಕೆಲಸಗಳು ಆಗಿವೆ. ಇವು ಯಾರ ಪ್ರಯೋಜನಕ್ಕೆ ಎಂಬುದಾಗಿ ನಾನು ಕೇಳಬೇಕಾಗಿದೆ. ಇವರಲ್ಲಿ ನಿಜವಾಗಿ ಒಂದು ಪ್ರಜಾಪ್ರಭುತ್ವದ ತಿರುಳು ಇದೆಯೇ ಎಂಬುದಾಗಿ ನಾನು ಪ್ರಶ್ನೆಮಾಡಬೇಕಾಗಿದೆ. ಇವರ ಯೋಜನೆಗಳಿಂದ ಗುತ್ತಿಗೆದಾರರು ಹಾಗೂ ಬಂಡವಾಳಶಾಹಿಗಳನ್ನು ಅಭಿವೃದ್ಧಿಗೊಳಿಸುತ್ತಿದ್ದಾರೆ. ಆ ಕೆಲಸ ಮಾಡುವುದನ್ನು ಬಿಟ್ಟು ಬಡ ಜನತೆಯಲ್ಲಿ ಸುಗಮ ಜೀವನ ತರುವುದಕ್ಕೆ ಪ್ರಯತ್ನ ಮಾಡಲಿಲ್ಲ. ಇಷ್ಟರವರೆಗೆ ಜನರನ್ನು ಉಪಯೋಗಿಸಿ ನಿರುದ್ಯೋಗವನ್ನು ವಿರೋಧಿಸಿ ಮ್ಯಾನ್‌ಪವರ್ ಯುಟಿಲೈಜ್ ಮಾಡಿದ್ದರೆ ಬಹಳ ಚೆನ್ನಾಗಿತ್ತು. ಆಗ ಇರತಕ್ಕ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸಾಧ್ಯವಾಗುತ್ತಿತ್ತು. ಇವರು ಆ ರೀತಿ ಕ್ರಮ ಸಾಕಷ್ಟು ತೆಗೆದುಕೊಳ್ಳದೆ ಎಲ್ಲರಿಗೂ ಉದ್ಯೋಗ ಕಲ್ಪಿಸುವ ರೀತಿಯಲ್ಲಿ ಈ ಯೋಜನೆಗಳು ಕೆಲಸಮಾಡಿವೆ ಎಂಬು

(ಶ್ರೀ ಎ. ಕೃಷ್ಣ ಶೆಟ್ಟಿ)

ದಾಗಿ ಹೇಳಿದ್ದಾರೆ. ಈ ಒಂದು ದೃಷ್ಟಿಯಿಂದ ನಮ್ಮ ಮೂರನೆಯ ಪಾಂಚವಾರ್ಷಿಕ ಯೋಜನೆ ಅಂತ್ಯವಾಗುವ ಹೊತ್ತಿಗೆ ನಮ್ಮ ರಾಜ್ಯದಲ್ಲಿ ಸಾಧಾರಣವಾಗಿ ಸುಮಾರು 10 ಲಕ್ಷಕ್ಕೆ ಕಡಮೆಯಿಲ್ಲದಷ್ಟು ನಿರುದ್ಯೋಗಿಗಳು ಇರುತ್ತಾರೆಂದು ಅಂಕಿ ಅಂಶಗಳಿಂದ ಹೇಳಬಹುದು. ನಮ್ಮ ರಾಜ್ಯದಲ್ಲಿ ಸಾಮಾನ್ಯವಾಗಿ ಒಬ್ಬ ಸಾಮಾನ್ಯ ಮನುಷ್ಯನ ವರಮಾನ ಅಥವಾ ಉತ್ಪತ್ತಿಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಬರೀ ಬಂಡವಾಳಕ್ಕೆ 306 ರೂಪಾಯಿಗಳು ಅವನಿಗೆ ಬೇಕಾಗುತ್ತದೆ. ಇಲ್ಲಿ ಅದು 217 ರೂಪಾಯಿಗಳಾದರೆ ಮದ್ರಾಸ್, ಕೇರಳ ಮತ್ತು ಆಂಧ್ರದಲ್ಲಿ ಇದಕ್ಕಿಂತ ಹೆಚ್ಚಿದೆ. ಇನ್ನು ಹಳ್ಳಿಯ ಜನರ ಸಾಲದ ಮಟ್ಟಿಗೆ ತೆಗೆದುಕೊಂಡರೆ 1951 ರಲ್ಲಿ ಒಬ್ಬ ಸಾಮಾನ್ಯ ಮನುಷ್ಯನಿಗೆ 105 ರೂಪಾಯಿಗಳಿದ್ದುದು ಈಗ ಪ್ರತಿಯೊಬ್ಬನ ಸಾಲ ಹಳ್ಳಿಯಲ್ಲಿ 248 ರೂಪಾಯಿಗಳವರೆಗೆ ಆಗಿದೆ. ಒಂದು ಕಡೆಯಲ್ಲಿ ಸಾಲ, ಒಂದು ಕಡೆಯಲ್ಲಿ ವರಮಾನ ಕಡಿಮೆ — ಹೀಗೆಲ್ಲಾ ಇರುವಾಗ ಈ ಯೋಜನೆಗಳ ಪ್ರಯೋಜನ ಜನರಿಗೆ ಸಾಧ್ಯವಾದಷ್ಟು ಆಗಿಲ್ಲ. ಉಪಯೋಗವೆಲ್ಲಾ ಆದುದು ದೊಡ್ಡ ದೊಡ್ಡ ಬಂಡವಾಳಗಾರರಿಗೆ, ಗುತ್ತಿಗೆದಾರರಿಗೆ ಹಾಗೂ ಅವರ ಸ್ವಂತ ಜನರಿಗೆ ಮಾತ್ರ. ಅವರಿಗೆ ಚುನಾವಣೆಯಲ್ಲಿ ಸಹಾಯಮಾಡುವಂತಹ ಜನರಿಗೆ ಅನುಕೂಲ ಕಲ್ಪಿಸಿಕೊಡುವ ರೀತಿಯಲ್ಲಿ ಈ ಯೋಜನೆಗಳು ಬೆಳೆದಿವೆ. ಆದ್ದರಿಂದ ಇವರ ಯೋಜನೆಗಳಲ್ಲಿ ಪ್ರಜಾಪ್ರಭುತ್ವದ ತಿರುಳಿಲ್ಲವೆಂದು ನಾನು ಹೇಳಬಯಸುತ್ತೇನೆ.

ಇನ್ನು ಆಹಾರದ ಮಟ್ಟಿಗೆ ಹೇಳುವುದಾದರೆ, ನಾನು ಈಗ ಒಂದು ವಿಷಯವನ್ನು ಇಲ್ಲಿ ಹೇಳಬೇಕಾಗಿದೆ. ನಮ್ಮ ಈಗಿನ ಆಹಾರ ಮಂತ್ರಿಗಳು ಮೊದಲು ಮುಖ್ಯಮಂತ್ರಿಗಳಾಗಿದ್ದರು. ನಂತರ ಆರ್ಥಿಕಮಂತ್ರಿಗಳಾಗಿದರು. ಈಗ ಆಹಾರ ಮಂತ್ರಿಗಳಾಗಿದ್ದಾರೆ. ಆದರೆ ಇನ್ನು ಕ್ಷಾಮ ಮಂತ್ರಿಗಳು ಆಗಬಾರದವೆಂದು ನಾನು ಹೇಳುತ್ತೇನೆ.

ಕೆಲವು ಸಲ ನಾವು ದಾನ ಕೊಡುವಾಗ ಕುಂಬಳಕಾಯಿಯನ್ನು ಕೊಡುತ್ತೇವೆ. ಅದನ್ನು ಯಾರೂ ಕೈಯಲ್ಲಿ ಹಿಡಿಯುವುದಕ್ಕೆ ಹೋಗುವುದಿಲ್ಲ. ಬೇರೆ ಧಾನ್ಯಗಳನ್ನು ಹಿಡಿಯುತ್ತಾರೆ. ಇಲ್ಲಿ ನಾನು ಇನ್ನೊಂದು ವಿಷಯವನ್ನು ಹೇಳುತ್ತೇನೆ. ಆಹಾರ ಮಂತ್ರಿಗಳ ಮಟ್ಟಿಗೆ ಆಹಾರ ಖಾತೆ ಒಂದೇ ಇದ್ದರೆ ಸಾಲದು. ಕೃಷಿ ಖಾತೆ ಮತ್ತು 'ಸಣ್ಣ ನೀರಾವರೀ ಖಾತೆ ವೆಟರಿನರಿ ಖಾತೆ ಇವುಗಳೆಲ್ಲ ಇದ್ದರೆ ಅನುಕೂಲವಾಗುತ್ತದೆ. ಆಹಾರ ಖಾತೆಗೆ ಸಂಬಂಧಪಟ್ಟ ವಿಷಯಗಳನ್ನೊಳಗೊಂಡ ಎಲ್ಲ ಖಾತೆಗಳೂ ಒಟ್ಟಿಗೆ ಇದ್ದು ಅವು ಸರಿಯಾದ ರೀತಿಯಲ್ಲಿ ಕೆಲಸ, ಮಾಡುವಂತೆ ಇರಬೇಕು ಎಂದು ನನ್ನ ಅಭಿಪ್ರಾಯ.

ಇನ್ನೊಂದು ಏನೆಂದರೆ, ಮಜೂರಿ ಖಾತೆಯ ಮಟ್ಟಿಗೆ ನಮ್ಮ ರಾಜ್ಯದಲ್ಲಿ ಈ ವರ್ಷ ಬಹಳ ದೀರ್ಘಕಾಲ ಮಜೂರರ ಹೋರಾಟ ನಡೆದದ್ದನ್ನು ನೋಡಿದ್ದೇವೆ. ಮಂಗಳೂರಿನ ವಿಷಯ ಹೇಳುವುದಾದರೆ ಗೇರು ಬೀಜದ ಕಾರ್ಖಾನೆಯ ಹೋರಾಟ ನೂರು ದಿವಸಗಳ ಮೇಲ್ಪಟ್ಟು ನಡೆಯಿತು. ಹೆಂಚಿನ ಕಾರ್ಖಾನೆ ಹೋರಾಟ ಸುರಪುರ ಸರ್ಕಲಿನಲ್ಲಿ ಐದು ತಿಂಗಳು ನಡೆಯಿತು. ಹೀಗೆಯೇ ಹೋರಾಟಗಳು ಬಹಳ ದೀರ್ಘಕಾಲ ನಡೆಯಿತು. ಇಷ್ಟು ಮಾತ್ರವಲ್ಲ. ವಿದ್ಯಾರ್ಥಿಗಳ ಹೋರಾಟ ನಡೆಯುತ್ತಿದೆ, ಬೇರೆ ಜನರ ಹೋರಾಟ ನಡೆಯುತ್ತಿದೆ. ಇದನ್ನೆಲ್ಲ ನೋಡುವಾಗ ಮಜೂರರ ಮಟ್ಟಿಗೆ ಸರ್ಕಾರ ಯಾವ ಧೋರಣೆಯನ್ನು ವಹಿಸಿದೆ, ಯಾವ ದೃಷ್ಟಿಯನ್ನು ತೆಗೆದುಕೊಂಡಿದೆ, ಅವರ ಮಜೂರಿಯನ್ನು ಹೆಚ್ಚಿಸುವ ವಿಷಯದಲ್ಲಿ, ಅವರಿಗೆ ಅನುಕೂಲಗಳನ್ನು ಕಲ್ಪಿಸುವುದರಲ್ಲಿ ಯಾವ ರೀತಿ ನಡೆದಿದೆ ಎನುವುದಕ್ಕೆ ಅವರು ದೀರ್ಘ ಕಾಲ ನಡೆಸುತ್ತಿರುವ ಹೋರಾಟವೇ ನಿದರ್ಶನವಾಗಿದೆ. ಯಾವ ರಾಜ್ಯದಲ್ಲಿಯೇ ಆಗಲಿ, ಮಜೂರರು ಎಷ್ಟು ಹೆಚ್ಚು ಅನೂಕೂಲಗಳನ್ನು ಪಡೆಯುತ್ತಾರೆ ಅಲ್ಲಿ ಹೆಚ್ಚಿನ ಉತ್ಪಾದನೆ ಬರುತ್ತದೆ, ಹೆಚ್ಚು ಉತ್ಪಾದನೆ ಇಲ್ಲದೆ ದೇಶದ ಅಭಿವೃದ್ಧಿಗೆ ಸಾಧ್ಯವಿಲ್ಲ. ಆದ್ದರಿಂದ ಈ ದೃಷ್ಟಿಯನ್ನು ಇಟ್ಟುಕೊಂಡು ಮಜೂರರ ನ್ಯಾಯವಾದ ಕೇಳಿಕೆಗಳನ್ನು ಈಡೇರಿಸಿ ಅವರಿಗೆ ಹಿತವಾಗುವ ರೀತಿಯಲ್ಲಿ ಸರ್ಕಾರ ಕೆಲಸ ಮಾಡಬೇಕೆಂಬುದು ನನ್ನ ಅಭಿಪ್ರಾಯ.

ಮತ್ತೊಂದು ವಿಷಯ. ಜನರ ಜೀವನ ಮಟ್ಟವು ಬಹಳ ಮೇಲೆ ಇದೆ, 1961 ರಲ್ಲಿ ನೂರು ಪಾಯಿಂಟುಗಳಿದ್ದದ್ದು ಈ ದಿವಸ ಮಂಗಳೂರಿನಲ್ಲಿ 600 ರಿಂದ 700 ವರೆಗೆ ಇವೆ. ಆದರೆ ಕೆಲಸ ಮಾಡುವವನಿಗೆ ಸಿಕ್ಕುವ ಮಜೂರಿ, 'ರಿಯಲ್ ವೇಜ್' ವಾಸ್ತವ ಮಜೂರಿ 1951ನೆ ಇಸವಿಯದು ಸಿಕ್ಕುತ್ತದೆ. ಕೃಷಿ ಮಜೂರನಿಗೆ ಅದಕ್ಕಿಂತ ಕಡಿಮೆ ಸಿಕ್ಕುತ್ತದೆ. ಅವನಿಗೆ ಬರುವ ಮಜೂರಿಯಿಂದ ಜೀವನಾವಶ್ಯಕ ವಸ್ತುಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಒಂದು ರೂಪಾಯಿಯನ್ನು ಪೇಟೆಗೆ ತೆಗೆದುಕೊಂಡು ಹೋದರೆ 1951 ನೆ ಇಸವಿಯಲ್ಲಿ ಎರಡು ಆಣೆಗೆ ಅಥವಾ 15 ಪೈಸೆಗೆ ಎಷ್ಟು ಸಾಮಾನುಗಳನ್ನು ತರುತ್ತಿದ್ದೆವೋ ಅಷ್ಟು ಸಾಮಾನುಗಳನ್ನೂ ತರುವುದಕ್ಕೆ ಸಾಧ್ಯವಿಲ್ಲ

ಇದರಿಂದ ಮಜೂರರ ಸ್ಥಿತಿ ಯಾವ ರೀತಿ ಇದೆ ಎಂದು ಭಾವಿಸಬಹುದು. ಮಧ್ಯಮ ವರ್ಗದವರು ಈಗಿನ ಬೆಲೆಗಳಲ್ಲಿ ನಾಶ ಹೊಂದುತ್ತಾರೆ. ಈ ಬೆಲೆಗಳನ್ನು ತಡೆ ಹಿಡಿಯದೆ ಈ ರೀತಿ ಹಣದ ಉಬ್ಬರ ವನ್ನು ಬಿಡತಕ್ಕದ್ದು ಸರಿಯಲ್ಲ. ಅದನ್ನು ಸರಿಪಡಿಸುವುದು ಅತ್ಯಗತ್ಯವುಂಟು. ಇಲ್ಲದಿದ್ದರೆ ಇದರಿಂದ ಸಹ ಹಾನಿ ಬರಲಿಕ್ಕೆ ಸಾಧ್ಯವುಂಟು.

ನಾಲ್ಕನೆಯ ಯೋಜನೆಗೆ ಹಣಕ್ಕಾಗಿ ಬೇಕಾದ ಹೊಸ ತೆರಿಗೆಯನ್ನು ಹಾಕಬೇಕಾಗುವುದೆಂದು ತಿಳಿಸಿದ್ದಾರೆ. ಇದರಲ್ಲಿ ಮುಖ್ಯವಾದುದು ರವೆನ್ಯೂ ಸರ್ಚಾರ್ಜ್ ಹಾಕುವ ಮಸೂದೆಯನ್ನು ಸಭೆಯ ಮುಂದೆ ತಂದಿರುವುದು. ನಮ್ಮ ಜಿಲ್ಲೆಯಮಟ್ಟಿಗೆ ಹೇಳುವುದಾದರೆ ತೋಟಗಳಿಗೆ, ಗದ್ದೆಗಳಿಗೆ ಬೇರೆ ಎಲ್ಲ ಕಡೆಗಳಲ್ಲಿಯೂ ನೂರು ರೂಪಾಯಿ ಇದ್ದರೆ ನಮ್ಮಲ್ಲಿ 800 ರೂಪಾಯಿ ಕೊಡಬೇಕಾಗುತ್ತದೆ. ಹೆಲ್ತ್ ಟ್ಯಾಕ್ಸ್, ಎಜುಕೇಷನ್ ಟ್ಯಾಕ್ಸ್, ಪಂಚಾಯಿತಿ ಟ್ಯಾಕ್ಸ್, ನೀರಾವರೀ ತೆರಿಗೆ ಇವೆಲ್ಲವನ್ನೂ ಸೇರಿಸಿದರು ಮಂಗಳೂರು ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ನೂರು ರೂಪಾಯಿಗೆ 9)0 ರೂಪಾಯಿ ವರೆಗೆ ಕೊಡಬೇಕಾಗುತ್ತದೆ. ಹೀಗೆ ಮಾಡುವುದು ಸರಿಯಲ್ಲ. ಮಾರಾಟ ತೆರಿಗೆಯನ್ನು ಸರಿಯಾಗಿ ವಸೂಲು ಮಾಡಿದರೆ ನಮಗೆ ನಿಜವಾಗಿಯೂ ಬೇಕಾದಷ್ಟು ಹಣ ಸಂಗ್ರಹವಾಗುವುದಕ್ಕೆ ಸಾಧ್ಯ ವುಂಟು. ಪಾನನಿರೋಧವನ್ನು ತೆಗೆದು ಹಾಕಿದರೆ ಬೇಕಾದಷ್ಟು ಹಣ ಸಂಗ್ರಹಿಸಲಿಕ್ಕೆ ಸಾಧ್ಯವುಂಟು ಈ ಎರಡು ಬಾಬುಗಳಿಂದ ನಾಲ್ಕನೆಯ ಯೋಜನೆಗೆ ಎಷ್ಟು ಹಣ ಬರಬೇಕೋ ಅಷ್ಟನ್ನು ಪಡೆಯು ವುದಕ್ಕೆ ಸಾಧ್ಯವುಂಟು. ಇದನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ರವೆನ್ಯೂ ಕಂದಾಯದ ಮೇಲೆ ಸರ್ಚಾರ್ಜ್ ಹಾಕಿ ಹಣವನ್ನು ವಸೂಲ್ಮಾಡುವುದರಿಂದ ಬಡ ರೈತರಿಗೆ ಬಹಳ ತೊಂದರೆ ಯಾಗುತ್ತದೆ. ಅವರನ್ನು ಬಹಳ ಕಷ್ಟದ ಸ್ಥಿತಿಗೆ ದೂಡಿದ ಹಾಗೆ ಆಗುತ್ತದೆ. ಸರ್ಕಾರದವರು ಇದನ್ನು ತರಬಾರದು ಎಂದು ಹೇಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಿಂದ ಕೇರಳ ರಾಜ್ಯಕ್ಕೆ ಅಕ್ಕಿ ಹೋಗುವುದಿಲ್ಲ ಎಂದು ಮಾನ್ಯ ಶ್ರೀನಿವಾಸ ನಾಯಕರು ಹೇಳಿದರು. ನನ್ನೊಟ್ಟಿಗೆ ಶ್ರೀಮಾನ್ ಜತ್ತಿಯವರು ಬರಲಿ, ದಕ್ಷಿಣ ಕನ್ನಡ ಜಿಲ್ಲೆಯಿಂದ ಕೇರಳ ರಾಜ್ಯಕ್ಕೆ ಎಷ್ಟು ಧಾನ್ಯ ಹೋಗುತ್ತದೆ ಎನ್ನುವುದನ್ನು ತೋರಿಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ಸಮೀಪದ ಒಂದು ಗ್ರಾಮದಲ್ಲಿ ಅವಲಕ್ಕಿಯನ್ನು ಊಟ ಮಾಡಬಹುದು. ಅದು ಇಲ್ಲಿಂದ ಕೊಂಡು ಹೋದದ್ದು. ಅಕ್ಕಿಯು ನೀರಿನ ಮೇಲೆ, ರೈಲಿನಲ್ಲಿ, ಮಾರ್ಗದಮೇಲೆ ಹೋಗುತ್ತದೆ. ಹೊತ್ತುಕೊಂಡೂ ಹೋಗುತ್ತಾರೆ. ಬೇರೆ ಬೇರೆ ರೀತಿಯಲ್ಲಿ ಹೋಗುತ್ತಿದೆ. ಇದಕ್ಕೆ ಒಂದು ಬಫರ್ ಜೋನ್ ನಮ್ಮಲ್ಲಿ ಅಲ್ಲಿಯ ಜನರಿಗೆ ಬೇಕಾದ ಆಹಾರ ಪದಾರ್ಥಗಳನ್ನು ಒದಗಿಸಿದರೆ ಕೇರಳಕ್ಕೆ ಕಳ್ಳತನದಲ್ಲಿ ಹೋಗುವ ಆಹಾರ ಪದಾರ್ಥಗಳನ್ನು ತಡೆಯಬಹುದು.

Mr. SPEAKER.—It may help us not to allow any quantity to pass beyond the limits.

Sri A. KRISHNA SHETTY.—That is what I am telling. Beyond south of Nethravathi, rice should not flow. ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಸರ್ಕಾರದವರು ಮಲತಾಯಿ ಧೋರಣೆಯಲ್ಲಿದ್ದಾರೆ. ನಮ್ಮಲ್ಲಿ ಆಗುವ ಯೋಜನೆಗಳು ಕೇಂದ್ರ ದಿಂದ ಆಗುವವು, ಬಂದರುಗಳಾಗಲೀ, ದೊಡ್ಡ ದೊಡ್ಡ ಮಾರ್ಗಗಳಾಗಲೀ ಎಲ್ಲ ಕೆಲಸಗಳೂ ಆಗುವುದು ಕೇಂದ್ರದಿಂದ. ಮೈಸೂರು ಸರ್ಕಾರದವರು ಇಲ್ಲಿಯವರೆಗೂ ಮಾಡಿರುವುದು ಏನು. ನಮ್ಮ ಜಿಲ್ಲೆಯಿಂದ ವಸೂಲಾಗುವ ಮಾರಾಟ ತೆರಿಗೆಯನ್ನು ಲೆಕ್ಕ ಮಾಡಿ, ಭೂಕಂದಾಯವನ್ನು ಲೆಕ್ಕ ಮಾಡಿ, ಮೋಟಾರು ವಾಹನಗಳ ಮೇಲೆ ಬರುವ ತೆರಿಗೆಯನ್ನು ಲೆಕ್ಕ ಮಾಡಿ, ಇತರ ತೆರಿಗೆ ಗಳನ್ನೆಲ್ಲ ಲೆಕ್ಕ ಮಾಡಿ. ನಮ್ಮ ಜಿಲ್ಲೆಯಿಂದಲೇ ಹೆಚ್ಚು ವರಮಾನ ಸರ್ಕಾರಕ್ಕೆ ಬರುತ್ತಿರುವುದು. ಆದರೆ ನಮಗೆ ಬೇರೆ ಕಡೆಯಿಂದ, ಕೇಂದ್ರದಿಂದ ಬರುವ ಹಣವನ್ನು ಸೇರಿಸಿ ಬೇಕಾದಷ್ಟು ಹಣವನ್ನು ಮಂಗಳೂರು ಜಿಲ್ಲೆಗೆ ಕೊಟ್ಟಿದ್ದೇವೆ ಎನ್ನುವುದು ಸರಿಯಲ್ಲ. ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಪ್ರತಿಯೊಂದು ಭಾಗದಲ್ಲಿಯೂ ಆಗಬೇಕಾದ ಕೆಲಸಗಳನ್ನು ಮಾಡಬೇಕಾದುದು ಸರ್ಕಾರದ ಮುಖ್ಯ ಕರ್ತವ್ಯ. ಆದರೂ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೆಚ್ಚಿನ ಅನುಕೂಲತೆಗಳನ್ನು ಕೊಡುವುದು ಅಗತ್ಯವುಂಟು. ನಾನು ಹೇಳುವುದು ಏನೆಂದರೆ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದು ಕೊಳ್ಳುವುದು, ವಿದ್ಯುಚ್ಛಕ್ತಿಯನ್ನು ಹೆಚ್ಚು ಬಳಸಿಕೊಂಡು ಕೈಗಾರಿಕೆಗಳನ್ನು ಸ್ಥಾಪಿಸುವುದು ವ್ಯವಸಾಯ ಕಾಲೋನಿಗಳನ್ನು ತೆರೆದು ವ್ಯವಸಾಯಕ್ಕೆ ಹೆಚ್ಚು ಅನುಕೂಲ ಮಾಡುವುದು, ಮಲೆನಾಡು ಪ್ರದೇಶವನ್ನು ಅಭಿವೃದ್ಧಿ ಮಾಡಲು ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡು ಅದರ ಅಭಿವೃದ್ಧಿ ಮಾಡುವುದು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆಗಳನ್ನು ಉತ್ತಮಪಡಿಸುವ ಕಾರ್ಯವನ್ನು ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—On the first day 8 members participated, On the second day 15 members participated, on the 3rd day 11 members participated. I want to know how many more members are willing to participate. The whips of the parties should co-operate with the Chair Everybody walks away at the last moment.

(Four Hon'ble Members stood up to speak)

Hon'ble Minister for Agriculture is keeping indifferent health. Let him reply and then I will give five minutes each to other members who want to speak.

5 P.M.

ಶ್ರೀ ಜಿ. ನಾರಾಯಣಗೌಡ (ವ್ಯವಸಾಯ ಶಾಖೆಯ ಮಂತ್ರಿಗಳು).—ಸ್ವಾಮಿ, ಮಾನ್ಯ ಆಹಾರ ಮಂತ್ರಿಗಳು ಮತ್ತು ಮಾನ್ಯ ಕಂದಾಯ ಮಂತ್ರಿಗಳು ಮಾತನಾಡುವಾಗ್ಗೆ ವ್ಯವಸಾಯದ ಉತ್ಪಾದನೆ ವಿಷಯವಾಗಿ ಕೆಲವು ಅಂಶಗಳನ್ನು ಪ್ರಸ್ತಾಪಿಸಿದರು. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಈ ವರ್ಷ ನಮಗೆ ಬಹಳ ಕಠಿಣವಾದ ವರ್ಷ. ಮುಖ್ಯವಾಗಿ ನಮಗೆ ನೀರಿಲ್ಲದೆ ಕೆಲವು ಸಂದರ್ಭದಲ್ಲಿ ನೀರಿನ ಆಶ್ರಯವಿದ್ದರೂ ಬೆಳೆ ಒಣಗುತ್ತಿರುವುದನ್ನು ರಕ್ಷಿಸುವುದು, ದೊಡ್ಡ ದೊಡ್ಡ ನೀರಿನ ಆಶ್ರಯಗಳಲ್ಲಿ ಬೇಸಿಗೆ ಬೆಳೆಯನ್ನು ಬೆಳೆಯುವುದಕ್ಕೆ ರೈತರನ್ನು ಪ್ರೋತ್ಸಾಹಿಸುವುದು, ಈ ವಿಷಯಗಳ ಕಡೆ ಹೆಚ್ಚು ಗಮನವನ್ನು ಸರ್ಕಾರ ಕೊಟ್ಟಿದೆ. ಹಾಗೂ ಮಳೆಯ ಅಭಾವದಿಂದ ಒಣಗುತ್ತಾ ಇದ್ದ ಪೈರುಗಳನ್ನು ಪಂಪ್‌ಸೆಟ್‌ಗಳ ಮೂಲಕ ನೀರೆತ್ತಿ ರಕ್ಷಿಸುವುದಕ್ಕೆ ಸರ್ಕಾರ ಹೈರ್ ಪರ್‌ಚೇಸ್ ಸಿಸ್ಟಂ ಮೇಲೆ ಅರವತ್ತೈದುವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿತು. ಹಾಗೂ ಹೈರ್ ಪರ್‌ಚೇಸ್ ಮೇಲೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದ ರೈತರಿಗೆ ಬಾಡಿಗೆ ಮೇಲೆ ಅವನ್ನು ಕೊಡುವುದಕ್ಕೋಸ್ಕರ ರೆವಿನ್ಯೂ ಇಲಾಖೆಯವರಿಗೆ 45 ಲಕ್ಷ ರೂಪಾಯಿಗಳನ್ನು ಕೊಟ್ಟೆವು. ಆ ಪಂಪ್ ಸೆಟ್‌ಗಳನ್ನು ತಾಲ್ಲೋಕ್ ಬೋರ್ಡ್‌ಗಳ ಮೂಲಕ ಮತ್ತು ಪಂಚಾಯಿತಿಗಳ ಮೂಲಕ ಯಾರಿಗೆ ಹೈರ್ ಪರ್‌ಚೇಸ್ ಮೇಲೆ ಕೊಂಡುಕೊಳ್ಳುವುದಕ್ಕೆ ಸಾಧ್ಯವಿಲ್ಲವೋ ಅಂತಹವರಿಗೆ ಬಾಡಿಗೆ ದರದ ಮೇಲೆ ಕೊಡಲು ನಿಶ್ಚಯಿಸಲಾಯಿತು. ಈ ರೀತಿಯಾಗಿ ಬೆಳೆ ಒಣಗುತ್ತಾ ಇದ್ದುದನ್ನು ರಕ್ಷಿಸಲ್ಪಟ್ಟಿತು. ಹಾಗೂ ಈ ಬೇಸಿಗೆ ಬೆಳೆಯನ್ನು ದೊಡ್ಡ ದೊಡ್ಡ ನೀರಿನ ಆಶ್ರಯಗಳಲ್ಲಿ ಇದುವರೆಗೆ ಎಲ್ಲಿ ಬೆಳೆಯುತ್ತಾ ಇರಲಿಲ್ಲವೋ ಅಂಥ ಸ್ಥಳಗಳಲ್ಲಿ ಬೆಳೆಯುವುದಕ್ಕೆ ಸರ್ಕಾರ ರೈತರಿಗೆ ಪ್ರೋತ್ಸಾಹ ಕೊಟ್ಟಿತು. ಅದು ಮುಖ್ಯವಾಗಿ ಭದ್ರಾ ಏರಿಯಾದಲ್ಲಿ ಮತ್ತು ತುಂಗಭದ್ರಾ ಏರಿಯಾದಲ್ಲಿ. ಭದ್ರಾ ಏರಿಯಾದಲ್ಲಿ ಸುಮಾರು 85 ಸಾವಿರ ಎಕರೆಯೊಳಗೆ ರಾಗಿ ಮತ್ತು ಜೋಳವನ್ನು ಈ ಬೇಸಿಗೆಯೊಳಗೆ ಬೆಳೆಯಲು ಅವರಿಗೆ ಬೇಕಾದ ಸೌಕರ್ಯಗಳನ್ನು ಸರ್ಕಾರ ಕೊಟ್ಟಿತು. ತಮಗೆಲ್ಲರಿಗೂ ಗೊತ್ತಿರುವ ಹಾಗೆ ನಮ್ಮ ರಾಜ್ಯದಲ್ಲಿ ನಮಗೆ ಬೇಕಾಗಿದ್ದ ರಸಾಯನಿಕ ಗೊಬ್ಬರವನ್ನು ನಮ್ಮಲ್ಲಿ ಇರಲಿಲ್ಲವಾದರೂ ಸಹಿತ ಈ ಬೇಸಿಗೆ ಬೆಳೆಗೋಸ್ಕರವಾಗಿ ಕೇಂದ್ರ ಸರ್ಕಾರದವರನ್ನು ನಮ್ಮ ಮುಖ್ಯ ಮಂತ್ರಿಗಳು, ಬೇಸಿಗೆ ಬೆಳೆಗೆ ಅದನ್ನು ಹೆಚ್ಚಾಗಿ ಕೊಡಬೇಕೆಂದು ಕೇಳಿದಾಗ ಅವರು ದಯಮಾಡಿ 7 ಸಾವಿರ ಟನ್ನನ್ನು ನಮಗೆ ಕೊಟ್ಟರು. ಈ 7 ಸಾವಿರ ಟನ್ ನಮಗೆ ಕಡಿಮೆಯಾದ ಪ್ರಯುಕ್ತ ಮತ್ತೆ ನಾನು ಕೇಂದ್ರ ಸರ್ಕಾರಕ್ಕೆ ನಮಗೆ ಕನಿಷ್ಠಪಕ್ಷ 10 ಸಾವಿರ ಟನ್‌ಗಳಷ್ಟು ಕೊಡಬೇಕೆಂದು, ಕೇಂದ್ರ ವ್ಯವಸಾಯ ಮಂತ್ರಿಗಳಾದ ಶ್ರೀ ಸಿ. ಸುಬ್ರಮಣ್ಯಂರವರನ್ನು ಕೇಳಿದಾಗ ಅವರು ನಮಗೆ ಮತ್ತೆ 7 ಸಾವಿರ ಟನ್ನುಗಳನ್ನು ಕೊಟ್ಟರು. ಅದಕ್ಕೋಸ್ಕರವಾಗಿ ನಾನು ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಬಯಸುತ್ತೇನೆ. ಹಾಗೂ ನೈಟ್ರಾಜನ್ ಫರ್ಟಿಲೈಜರ್ಸ್ ಈ ಬೆಳೆಗೆ ಮುಖ್ಯವಲ್ಲ ಎಂಬುದು ತಮಗೆ ಗೊತ್ತು. ಸೂಪರ್ ಫಾಸ್ಫೇಟ್ ನಮ್ಮಲ್ಲಿ ಇರಲಿಲ್ಲವಾದ್ದರಿಂದ ಸೂಪರ್ ಫಾಸ್ಫೇಟ್ ತಯಾರು ಮಾಡುವ ಮೈಸೂರು ಕೆಮಿಕಲ್ ಫರ್ಟಿಲೈಸರ್ಸ್ ಮತ್ತು ಚಾಮುಂಡಿ ಕೆಮಿಕಲ್ಸ್, ಇವುಗಳ ಯಜಮಾನರುಗಳನ್ನು ಕರೆಸಿ ಅವರುಗಳನ್ನು ಕೇಳಿಕೊಂಡಿದ್ದರ ಬಗ್ಗೆ ಅವರುಗಳು ಸೂಪರ್ ಫಾಸ್ಫೇಟ್ ಕೊಡುತ್ತೇವೆಂದು ಭರವಸೆ ನೀಡಿದರು. ಹಾಗೆಯೇ ಕೊಟ್ಟರು ಮತ್ತು ಇನ್ನೂ ಕೊಡುತ್ತಾ ಇದ್ದಾರೆ. ಈ ಒಂದು ದೃಷ್ಟಿಯಿಂದ ಬೇಸಿಗೆ ಬೆಳೆಯನ್ನು ನಾವು ದೊಡ್ಡ ದೊಡ್ಡ ನದಿಗಳ ಮೂಲಕ ನೀರನ್ನು ಹಾಯಿಸಿ ಬೆಳೆಯುವುದು ಮತ್ತು ಬಾವಿಗಳ ಅಚ್ಚುಕಟ್ಟಿನೊಳಗೆ ಬೆಳೆಯುವುದರ ಮೂಲಕ ಸಾಧಾರಣವಾಗಿ ನಮ್ಮ ರಾಜ್ಯದೊಳಗೆ ಸುಮಾರು 5 ಲಕ್ಷ ಎಕರೆಯೊಳಗೆ ನಾವು ಇದನ್ನು ನಿರೀಕ್ಷಿಸಿದ್ದೇವೆ. ಈ 5 ಲಕ್ಷ ಎಕರೆಗಾದರೂ ಸಹಿತ ಅವರಲ್ಲಿ

ಉತ್ತಮವಾದ ಬಿತ್ತನೆ ಬೀಜವಿಲ್ಲದ್ದರಿಂದ ನಾವೇ ಸರಬರಾಜು ಮಾಡಬೇಕಾದ ಅವಶ್ಯಕತೆ ಒದಗಿತು. ಇನ್ನು ತಮಗೆಲ್ಲರಿಗೂ ಗೊತ್ತಿರುವ ಹಾಗೆ ಭದ್ರಾ ಏರಿಯಾದೊಳಗೆ ರಾಗಿ ಬೆಳೆಯುವುದು ಒಂದು ಹೊಸದು. ಅದಕ್ಕೋಸ್ಕರವಾಗಿ ನಾವು ನಮ್ಮ ರಾಜ್ಯದಲ್ಲಿದ್ದ ಉತ್ತಮ ತಳಿಯನ್ನು ಶೇಖರಣೆ ಮಾಡಿದ್ದೇವಲ್ಲದೆ, ನಾವು ಮದ್ರಾಸ್ ಸರ್ಕಾರದಿಂದ ಸಹಿತ 75 ಕ್ವಿಂಟಾಲ್ ಬಿತ್ತನೆ ಬೀಜವನ್ನು ತರಿಸುಕೊಳ್ಳುವುದಕ್ಕೆ ಅವರ ಅಪ್ಪಣೆ ಪಡೆದಾಗ್ಗೆ ಅಲ್ಲಿಯ ವ್ಯವಸಾಯ ಮಂತ್ರಿಗಳಾದ ಶ್ರೀ ರಾಮಯ್ಯನವರು ತಕ್ಷಣ ಅದಕ್ಕೆ ಅಪ್ಪಣೆ ಕೊಟ್ಟು ಮತ್ತೆ ಹೆಚ್ಚಿಗೆ ಬೇಕಾದಲ್ಲಿ ಬರೆಯಬೇಕೆಂದು ಹೇಳಿದರು. ಅದಕ್ಕೋಸ್ಕರವಾಗಿ ಅವರನ್ನು ಸಹಿತ ನಾನು ಈ ಸಮಯದೊಳಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇಷ್ಟು ಮಾಡಿ, ಬೇಸಿಗೆ ಬೆಳೆಯ ಆಂದೋಳನಕ್ಕೆ ಹೆಚ್ಚು ವಿಸ್ತರಣೆಯನ್ನು ಈ ಸಾರಿ ನಾವು ತೆಗೆದುಕೊಂಡಿದ್ದೇವೆ. ಹಾಗೆ ತೆಗೆದುಕೊಂಡಾಗ ಇದರಿಂದ ಬಹುಷಃ ನಮಗೆ ಹೆಚ್ಚು ಉತ್ಪತ್ತಿ ಬರುವ ನಿರೀಕ್ಷಣೆ ಇದೆ. ಅದೂ ಅಲ್ಲದೆ ಇನ್ನೊಂದು ಒಳ್ಳೆಯ ಸಮಾಚಾರ ನಮ್ಮ ಆಕ್ಸ್‌ಫಾಮ್ ಕಮಿಟಿಯವರು ಮುಂದೆ ಬಂದು ನಮ್ಮ ಕೃಷಿ ವಿಜ್ಞಾನ ವಿದ್ಯಾಲಯಕ್ಕೆ ಅವರ ಮೂಲಕ ನಮ್ಮ ತುಂಗಭದ್ರಾ ಏರಿಯಾದೊಳಗೆ 10 ಸಾವಿರ ಎಕರೆಗೆ ತಾವು ತಮ್ಮ ರಾಸಾಯನಿಕ ಗೊಬ್ಬರಗಳನ್ನು ಒದಗಿಸುವ ಹಾಗೆ ಅವರು ಒಂದು ಸಹಾಯ ಮಾಡಿರುವುದನ್ನು ಈ ಸಮಯದೊಳಗೆ ನಾವು ನೆನೆಯಬೇಕಾಗಿದೆ. 10 ಸಾವಿರ ಎಕರೆಗಳಲ್ಲಿಯೂ ಸಹಿತ ಕೃಷಿ ವಿದ್ಯಾನಿಲಯ ಮತ್ತು ತುಂಗಭದ್ರಾ ಯೋಜನೆಯನ್ನು ಇವರ ಜಂಟೀ ಕಾರ್ಯಕ್ರಮದಿಂದ ಸುಮಾರು 30 ಸಾವಿರ ಟನ್ ಆಹಾರ ಬೆಳೆಯುವ ಒಂದು ಉದ್ದೇಶ ಹೊಂದಿದೆ.

ಆದುದರಿಂದ ನಾವು ಬೇಸಿಗೆ ಬೆಳೆಗಳ ಒಂದು ಆಂದೋಲನದಿಂದ ನಮಗಿರುವ ಆಹಾರದ ಕೊರತೆಯನ್ನು ನೀಗಿಸಲು ಇಷ್ಟು ಸಹಾಯವಾಗುತ್ತದೆ ಎಂದು ನಾನು ಇಲ್ಲಿ ಹೇಳಬಯಸುತ್ತೇನೆ. ಇಷ್ಟೇ ಅಲ್ಲದೆ ಶ್ರೀಮಾನ್ ಮಂಜಯ್ಯಶೆಟ್ಟಿಯವರು ಇಲ್ಲಿ ಮಂಡಿಸಿರುವ ನಿರ್ಣಯದ ಮೇಲೆ ಮಾತನಾಡುತ್ತಾ ಅನೇಕ ಮಾನ್ಯ ಸದಸ್ಯರುಗಳು ಕೆಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರೊಳಗೆ ರಸಾಯನಿಕ ಗೊಬ್ಬರಗಳನ್ನು ಹೆಚ್ಚಾಗಿ ಸರಬರಾಜು ಮಾಡಬೇಕೆಂದು ಕೇಳಿದ್ದಾರೆ. ನಾವು ಈ ವರ್ಷ ಎಂದರೆ 66-67ನೇ ಸಾಲಿಗಾಗಿ 4,44,897 ಟನ್ನುಗಳಷ್ಟು ಈ ಗೊಬ್ಬರ ಬೇಕೆಂದು ಇಂಡೆಂಟು ಹಾಕಿದ್ದೇವೆ, ಕಳೆದ ವರ್ಷ 2,79,766 ಟನ್ನುಗಳಷ್ಟು ಗೊಬ್ಬರ ಬೇಕೆಂದು ಇಂಡೆಂಟು ಹಾಕಲಾಗಿತ್ತು. ಈ ವರ್ಷ ಇದಕ್ಕಿಂತ ಹೆಚ್ಚಾಗಿ ಎಂದರೆ 4,44,897 ಟನ್ನುಗಳಷ್ಟು ಬೇಕೆಂದು ಇಂಡೆಂಟನ್ನು ಮಾಡಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೋದ ವರ್ಷ ನೀವು ಮಾಡಿದ ಅಂದಾಜಿಷ್ಟು ಅದರಲ್ಲಿ ನಿಮಗೆಷ್ಟು ದೊರಕಿತು ?

ಶ್ರೀ ಜಿ. ನಾರಾಯಣ ಗೌಡ.—ಹೋದ ವರ್ಷ ನಾವು ಮಾಡಿದ್ದ ಇಂಡೆಂಟು 2,79,766 ಟನ್ನುಗಳು ಕೇಂದ್ರದವರು ಕೊಟ್ಟಿದ್ದು 1,28,000 ಟನ್ನುಗಳು ಇನ್ನು ನಮಗಿರುವ ಕೊರತೆ ಹೈಬ್ರಿಡ್ ಜೋಳದ ಬೀಜಗಳು. ಇದರ ಬಗ್ಗೆ ಅನೇಕರು ಇಲ್ಲಿ ಪ್ರಸ್ತಾಪಮಾಡಿದ್ದಾರೆ. ತಮಗೆಲ್ಲರಿಗೂ ಗೊತ್ತಿರುವಂತೆ ಈ ಹೈ ಬ್ರಿಡ್ ಸೀಡುಗಳ ಉತ್ಪಾದನೆ ಮಾಡುವುದು ಬಹಳ ಕಠಿಣವಾದುದು. ಮುಖ್ಯವಾಗಿ ಇದಕ್ಕೆ ಪೇರೆಂಟಲ್ ಸೀಡ್ ನ್ಯಾಷನಲ್ ಸೀಡ್ ಕಾರ್ಪೊರೇಷನ್ನಿನವರಿಂದ ಸರಬರಾಜು ಮಾಡಬೇಕು. ಅವರೂ ಸಾಕಾದಷ್ಟು ಮಾಡುತ್ತಿದ್ದರೂ ಅದೂ ಬಹುಶಃ ಸಾಧ್ಯವಾಗಲಿಕ್ಕಿಲ್ಲ. ಆದುದರಿಂದ ನಾವು ಎಲ್ಲಿ ಉತ್ತಮವಾದ ಸೀಡ್ ಗ್ರೋಯರುಗಳು ಎಂದಿರುತ್ತಾರೋ ಅವರ ಮೂಲಕ ಸೀಡುಗಳನ್ನು ತಂದು ನಾವು ಎಲ್ಲೆಲ್ಲಿ ಫಾರ್ಮುಗಳು ಎಂದು ಮಾಡಿದ್ದೇವೋ ಅಲ್ಲಿಗೆ ತಂದು ಇನ್ನೂ ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಯತ್ನ ಮಾಡಿದ್ದೇವೆ. ಅದು ಮುಂದಿನ ವರ್ಷ ಇದನ್ನು ಇನ್ನೂ ಹೆಚ್ಚಾಗಿ ಕೊಡುವುದಕ್ಕೆ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಹೈ ಬ್ರಿಡ್ ಜೋಳದ ಸೀಡುಗಳನ್ನು ತಯಾರು ಮಾಡುವುದರಲ್ಲಿ ಕೆಲವರು ಪ್ರಯತ್ನ ಪಟ್ಟಿದ್ದಾರೆ. ಅವುಗಳನ್ನು ಮಾಡಿ ಅದರ ಸುತ್ತ ಮುತ್ತಲಿರುವ ಪ್ರದೇಶಗಳಲ್ಲಿ ಉಪಯೋಗ ಮಾಡಲು ಪ್ರಯತ್ನ ಮಾಡಿದ್ದಾರೆ. ಅದರಿಂದಲೂ ಪೂರ್ಣವಾಗಿ ಯಶಸ್ಸನ್ನು ಪಡೆದಿಲ್ಲ. ಇದರಿಂದ ನಮಗೆ ಹೈಬ್ರಿಡ್ ಸೀಡ್ಸ್‌ಗಳೇನೋ ಬೇಕಾದಷ್ಟು ಸಿಗುತ್ತವೆ. ಇದರಲ್ಲಿ ಇನ್ನೊಂದು ವಿಷಯ ಇದೆ ಎನ್ನುವುದನ್ನು ಇಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದೆ. ಅನೇಕ ರೈತರು ಸರ್ಟಿಫೈಡ್ ಸೀಡ್ಸ್‌ಗಳೆಂದು ಹೇಳುವುದನ್ನು ಹೈ ಬ್ರಿಡ್ ಸೀಡುಗಳೆಂದು ಹೇಳಿ ಮಾರುತ್ತಿರುವುದು ಕಂಡುಬರುತ್ತಿದೆ. ಇದನ್ನು ರೈತರು ತೆಗೆದುಕೊಂಡು ಮೋಸಹೋಗುವ ಸಂಭವವೂ ಇದೆ. ಆದುದರಿಂದ ಇಂತಹ ಸೀಡುಗಳನ್ನು ತೆಗೆದುಕೊಳ್ಳುವಾಗ ಎಚ್ಚರಿಕೆಯಿಂದಿರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಕೆಲವು ಮಾನ್ಯ ಸದಸ್ಯರುಗಳು ನಮಗೆ ಬೋರ್‌ವೆಲ್ಸ್‌ಗಳನ್ನು ಹೆಚ್ಚಾಗಿ ಒದಗಿಸಿಕೊಡಬೇಕೆಂದು ಸಲಹೆ ಮಾಡಿದ್ದಾರೆ. ಹಾಗೂ ಟ್ರಾಕ್ಟರುಗಳು ಬೇಕೆಂದೂ ಸಲಹೆ ಮಾಡಿದ್ದಾರೆ. ಬಹುಶಃ ಟ್ರಾಕ್ಟರುಗಳ ವಿಚಾರ ತಮ್ಮೆಲ್ಲರಿಗೂ ಗೊತ್ತು. ನಮಗೆ ಈ ವರ್ಷ 49 ಟ್ರಾಕ್ಟರು

(ಶ್ರೀ ಜಿ. ನಾರಾಯಣಗೌಡ)

ಗಳನ್ನು ತೆಗೆದುಕೊಳ್ಳಬೇಕೆಂದು ಏನು ಅಂದಾಜು ಇತ್ತೋ ಆದರಂತೆ ನಮಗೆ 10 ಲಕ್ಷದಷ್ಟು ಹಣ ಒದಗಿಸಿರುವುದರಲ್ಲಿ ಸುಮಾರು 9 ಲಕ್ಷದಷ್ಟು ಹಣ ಕೊಟ್ಟು ಟ್ರ್ಯಾಕ್ಟರು ಕೊಳ್ಳಲು ಖರ್ಚು ಮಾಡಿದ್ದೇವೆ. ಅನೇಕರು ಬೋರ್ ವೆಲ್ಸ್‌ಗಳು ಬೇಕೆಂದು ಕೇಳಿದ್ದಾರೆ. ಬೋರ್ ವೆಲ್ಸ್‌ಗಳನ್ನು ತಯಾರು ಮಾಡುವವರನ್ನು ನಾವು ಕೂಡಿಕೊಂಡು ಅವರಿಂದ ಪಡೆಯಬೇಕಾದರೆ ನಮಗೆ ಒಂದು ತಿಂಗಳಿಗೆ ಒಂದು ಅಥವಾ ಎರಡುಬಾವಿಗಳನ್ನು ಮಾಡಿಕೊಡಲು ಮಾತ್ರ ಆಗುತ್ತಿದೆ. ನಮ್ಮಲ್ಲಿ ಈಗ ಸುಮಾರು 28 ಬೋರ್‌ವೆಲ್ಸ್‌ಗಳಿವೆ. ಬಹುಶಃ ಇದನ್ನು ಮಾರ್ಚಿ ತಿಂಗಳ ವೇಳೆಗೆ ಸುಮಾರು 55 ಬೋರ್ ವೆಲ್ಸ್‌ಗಳಷ್ಟು ಮಾಡಲು ಇದಕ್ಕೆ ತಕ್ಕ ಮೆಷಿನರಿಗಳು ಹಾಗೂ ಡ್ರೈವರುಗಳನ್ನು ಇದಕ್ಕಾಗಿ ತರಬೇತು ಮಾಡಬೇಕಾಗಿದೆ. ಇಲ್ಲಿ ಸದಸ್ಯರುಗಳು ಪ್ರತಿಯೊಂದು ತಾಲ್ಲೂಕಿಗೂ ಒಂದರಂತೆ ಒಂದೊಂದು ಬೋರ್‌ವೆಲ್ಸ್‌ಗಳನ್ನು ಕೊಡಬೇಕೆಂದು ಕೇಳಿದ್ದಾರೆ. ಪ್ರತಿ ತಾಲ್ಲೂಕಿಗೂ ಒಂದರಂತೆ ಕೊಡಲು ಅಭ್ಯಂತರವೇನೂ ಇರುವುದಿಲ್ಲ. ಆದರೆ ನಮಗೆ ಸರಬರಾಜು ಆಗುತ್ತಿಲ್ಲ. ಇದನ್ನು ನಡೆಸಲು ಬೇಕಾಗುವ ಮೆಕ್ಯಾನಿಕ್‌ಗಳು ಹಾಗೂ ಡ್ರೈವರುಗಳು ಕೂಡ ಇಲ್ಲ. ಅದಕ್ಕಾಗಿ ಈ ಸಾಲಿನಲ್ಲಿ ನಾವು 10 ಜನರನ್ನು ಡ್ರೈವರುಗಳಾಗಿ ಹಾಗೂ ಮೆಕ್ಯಾನಿಕ್‌ಗಳಾಗಿ ತರಬೇತಿ ಕೊಡುತ್ತಿದ್ದೇವೆ. ಮುಂದೆ 55 ಬೋರ್‌ವೆಲ್ಸ್‌ಗಳಿಗೆ ಬೇಕಾಗುವಷ್ಟು ಮೆಕ್ಯಾನಿಕ್‌ಗಳು ಹಾಗೂ ಡ್ರೈವರುಗಳು, ಇವರನ್ನು ನಾವು ನೇಮಕ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ನಮ್ಮ ಬಿಜಾಪುರ ಭಾಗದಲ್ಲಿ ರೆಕ್ಲಮೇಷನ್ ಸ್ಕೀಂನ್ನು ಜಾರಿಯಲ್ಲಿ ತರದೆ ತೊಂದರೆಯಾಗುತ್ತಿದೆ ಎಂದು ಹೇಳಿದರು. ನಾವು ಈಗಾಗಲೇ ಈ ಸಾಯಿಲ್ ರೆಕ್ಲಮೇಷನ್ ಸ್ಕೀಂನ್ನು ಜಾರಿಗೆ ತಂದಿದ್ದೇವೆ, ಇದಕ್ಕೆ ಬೇಕಾದ ಶಿಬ್ಬಂದಿಯನ್ನು ನೇಮಕ ಮಾಡಲಾಗಿದೆ. ಅದರೆ ಫೀಲ್ಡ್ ಮೆನ್‌ಗಳನ್ನು ನೇಮಕ ಮಾಡಲು ಆಗಲಿಲ್ಲ. ಏಕೆಂದರೆ ಮಧ್ಯದಲ್ಲಿ ಹೈಕೋರ್ಟಿನವರಿಂದ ಸ್ಟೇ ಆರ್ಡರು ಬಂದುದರಿಂದ ಇವರ ನೇಮಕಗಳನ್ನು ಮಾಡಲು ನಿಧಾನವಾಗಿದೆ. ಸ್ಟೇ ಆರ್ಡರು ವೆಕೇಟ್ ಆಗುವುದರಲ್ಲಿದೆ. ಅದಾದ ಕೂಡಲೇ ಅವರನ್ನೂ ನೇಮಕ ಮಾಡಲು ಪ್ರಯತ್ನಪಡುತ್ತೇನೆ. ನಮ್ಮ ರಾಜ್ಯದಲ್ಲಿ ಬೆಳೆಯನ್ನು ಹೆಚ್ಚುಮಾಡಲು ಪ್ರಯತ್ನ ಮಾಡಬೇಕು ಮತ್ತು ಆ ರೀತಿ ಯತ್ನ ಮಾಡುತ್ತಿದ್ದೇವೆ, ಮತ್ತು ಇನ್ನೂ ಕೆಲವು ಸಲಹೆಗಳನ್ನೂ ಮಾನ್ಯ ಸದಸ್ಯರುಗಳು ಕೊಟ್ಟಿದ್ದಾರೆ ಮತ್ತು ಪ್ರಸ್ತಾಪಮಾಡಿದ್ದಾರೆ. ಅವುಗಳ ಕಡೆಗೂ ಹೆಚ್ಚು ಗಮನಕೊಡುತ್ತೇವೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri SANJIVANATH AIKALA.—Sir, I will confine myself to, only one subject and that is about the handloom weavers the very despicable plight of these people in the entire State. I very much regret that the Minister had no tears to shed about the pitiable plight of the handloom weavers in the State. What is the position of all these handloom weavers in the State ? Due to scarcity conditions, large quantities of handloom production has accumulated, and consequently the weavers cannot find ways and means to sell the finished products. And, the Government has not, in the State Handloom Society or other societies, come to the rescue of these people. Handloom industry is under the control of two departments—the Industries Department and the Co-operative Department. Consequently. it is not a child of anybody. Whatever inconvenient part of the work is there, it is sent to the other department. It has become an orphan. I understand that a rebate which is being given in all the neighbouring States, in Kerala, in Tamilnad, in Andhra and Maharashtra is denied to the handloom weavers of the Mysore State. Government got that rebate from the Central Government in 1963, but that is not given to the societies or handloom weavers. I understand that that amount is diverted to other departments. When the Industries Department is asked, they throw the ball to the Co-operation Department, and when this Department is asked, they say that it is the Industries Department that is responsible. Consequently, this rebate is withheld and that is not given to the handloom weavers.

There is what is known as the Handloom Weavers Apex Society in Bangalore. This Apex Society is a parent body to all the primary societies. It is required to supply to the primary societies yarn, colour and other foreign goods. What does this Apex Society do? It sells all the goods to the private people in black market, as a result of which the primary societies are denied what is legitimately due to them, and whatever goods are not sold are kept in dead stock in this Apex Society. There is a dead stock of nearly Rs. 4 lakhs worth of sarees and Rs. 7 lakhs worth of yarn. In this way, this State Handloom Society is another small brother or big brother of Khadi Board which is swindling money. I hold the Hon'ble Finance Minister responsible for this mishap.

Mr. SPEAKER.—The Hon'ble Member is at liberty to hold the Hon'ble Minister responsible for that.

Sri SANJEEVANATH AIKALA.—I would like to draw the attention of the Hon'ble Minister concerned to the great Cyclone that prevailed in the District and the inflow of saline water into the standing crops. I request that necessary steps on a large scale should be taken to protect the standing crops, and I pray that in coastal areas not only relief should be given to the farmers, but remission of land revenue should also be given effect to.

With these words, I thank you.

†ಶ್ರೀ ವೈ. ಮಂಜಯ್ಯಶೆಟ್ಟಿ (ಬೈಂದೂರ್).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ನಾನು ಮಂಡಿಸಿದ ನಿರ್ಣಯದ ಮೇಲೆ ಈ ಮಾನ್ಯ ಸಭೆಯ ಮಾನ್ಯ ಸದಸ್ಯರು ಬಹಳ ಮೇಲ್ಮಟ್ಟದ ಚರ್ಚೆಯನ್ನು ಮಾಡಿದ್ದಾರೆ. ಅದಕ್ಕೋಸ್ಕರ ನಾನು ಅವರೆಲ್ಲರನ್ನು ಅಭಿನಂದಿಸುತ್ತೇನೆ. ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ಗೋಪಾಲಗೌಡರು ನಾನು ನಿರ್ಣಯನ್ನು ಸಭೆಯ ಮುಂದೆ ಮಂಡಿಸುವ ಸಂದರ್ಭದಲ್ಲಿ ನನ್ನನ್ನು ಕನ್ನಡದಲ್ಲಿ ಭಾಷಣ ಮಾಡಬೇಕೆಂದು ಹೇಳಿದರು. ಆದರೆ ನಾನು ಭಾಷಣವನ್ನು ಇಂಗ್ಲೀಷಿನಲ್ಲಿ ಪ್ರಾರಂಭಮಾಡಿದ್ದರಿಂದ ಅದನ್ನೇ ನಾನು ಮುಂದುವರಿಸ ಬೇಕಾಯಿತು. ಈ ಸಂದರ್ಭದಲ್ಲಿ ನಾನು ಶ್ರೀಮಾನ್ ಗೋಪಾಲಗೌಡರಿಗೆ ಹೇಳುವುದೇನೆಂದರೆ, ನಾನೂ ಸಹ ಅವರಷ್ಟೇ ಕನ್ನಡದಲ್ಲಿ ಅಭಿಮಾನ ಉಳ್ಳವನು. ಅವರಿಗಿಂತ ಉತ್ತಮವಾದ ಶೈಲಿಯಲ್ಲಿ ನಾನು ಮಾತನಾಡುವುದಕ್ಕೆ ಸಾಧ್ಯವಿದೆ. ಆದ್ದರಿಂದ ಕನ್ನಡದಲ್ಲಿ ನನಗೆ ಒಂದು ಹೆಚ್ಚಿನ ಅಭಿಮಾನ ಇದೆ. ಹಾಗೂ ಸಾಕಷ್ಟು ಒಳ್ಳೆಯ ರೀತಿಯಲ್ಲಿ ಕನ್ನಡದಲ್ಲಿ ಮಾತನಾಡುವುದಕ್ಕೆ ನನಗೆ ಶಕ್ತಿ ಇದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ.

ಇನ್ನು ಈ ನಿರ್ಣಯದ ಮೇಲೆ ಚರ್ಚೆಮಾಡತಕ್ಕ ಸಂದರ್ಭದಲ್ಲಿ ಬಹಳ ಹೆಚ್ಚಿನ ಸದಸ್ಯರು ಆಹಾರ ಸಮಸ್ಯೆ ಮತ್ತು ಕೃಷಿಯ ಸಮಸ್ಯೆಯ ಬಗ್ಗೆ ಹೇಳಿದ್ದಾರೆ. ಈ ವಿಚಾರದಲ್ಲಿ ಅನೇಕ ಕುಂದು ಕೊರತೆಗಳನ್ನು ಸಹ ಅನೇಕ ಮಾನ್ಯ ಸದಸ್ಯರು ಸರ್ಕಾರದವರ ಗಮನಕ್ಕೆ ತಂದುಕೊಟ್ಟಿದ್ದಾರೆ. ಈ ವಿಚಾರದಲ್ಲಿ ನಮ್ಮ ಆಹಾರ ಮಂತ್ರಿಗಳು ಮತ್ತು ಕೃಷಿ ಮಂತ್ರಿಗಳು ಸಮರ್ಪಕವಾಗಿ ಉತ್ತರವನ್ನು ಕೊಟ್ಟಿರುವುದರಿಂದ ಆ ವಿಚಾರವಾಗಿ ನಾನು ಪುನಃ ಉತ್ತರವನ್ನು ಕೊಟ್ಟರೆ ಚರ್ವಿತ ಚರ್ವಣವಾದೀತು. ಈ ವಿಚಾರದಲ್ಲಿ ಸರ್ಕಾರದ ಧೋರಣೆ ಏನು, ಆ ಬಗ್ಗೆ ಸರ್ಕಾರದವರು ಕೈಗೊಂಡ ಉತ್ತಮ ಕಾರ್ಯಗಳೇನು ಮತ್ತು ಆಹಾರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಯಾವ ರೀತಿ ಎಷ್ಟರಮಟ್ಟಿಗೆ ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ ಎನ್ನುವ ವಿಚಾರವನ್ನು ಇಬ್ಬರು ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಅದು ನಾವೆಲ್ಲರೂ ಒಪ್ಪತಕ್ಕ ವಿಚಾರವಾಗಿದೆ. ಮೊನ್ನೆ ನಾನು ಹೇಳಿದಂತೆ ಆಹಾರ ಸಮಸ್ಯೆ ರಾಷ್ಟ್ರ ಸಮಸ್ಯೆ. ಈ ರಾಷ್ಟ್ರದ ಸಮಸ್ಯೆಯನ್ನು ಬಗೆ ಹರಿಸುವುದು ಬರೀ ಆಳುವ ಪಕ್ಷದ ಹೊಣೆಯೇ ಅಲ್ಲ. ಎಲ್ಲಾ ಪಕ್ಷದ ಜನರೂ ಸೇರಿ ಒಮ್ಮತ ದಿಂದ ಒಗ್ಗಟ್ಟಿನಿಂದ ಇದನ್ನು ಬಗೆಹರಿಸಬೇಕು ಎನ್ನುವುದು ನಮ್ಮ ಆಶಯ. ಇತರ ಎಲ್ಲಾ ವಿಚಾರ ಗಳನ್ನೂ ಮಾನ್ಯ ಮಂತ್ರಿಗಳು ಹೇಳಿರುವುದರಿಂದ ನನ್ನ ಉತ್ತರದಲ್ಲಿ ಹೆಚ್ಚಿನ ಅಂಶಗಳನ್ನು ಹೇಳದೆ ನಾನು ಈ ಸಭೆಯ ಮುಂದೆ ಮಂಡಿಸಿದ ನಿರ್ಣಯವನ್ನು ಎಲ್ಲರೂ ಒಟ್ಟಾರೆ ಒಮ್ಮತದಿಂದ ಸಮ್ಮತಿಸಿದ್ದಕ್ಕೆ ಇನ್ನೊಮ್ಮೆ ಅವರೆಲ್ಲರಿಗೂ ನನ್ನ ಧನ್ಯವಾದಗಳನ್ನು ಅರ್ಪಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—I will put the amendments to the Vote. The question is :

"That the following words shall be added at the end of the motion :

'but regret that—

(a) the Address makes no demand for an early solution of the Maharashtra-Mysore Border dispute in accordance with the assurance given by the Hon'ble Chief Minister in the First Session of the Legislative Assembly after the Re-organisation of States in 1956 ;

(b) the Address makes no adequate mention of the deteriorating Food Problem in the State and Government's inability to handle it ;

(c) Government have crippled Civil Liberties under the Defence of India Rules'."

The amendment was negatived.

Mr. SPEAKER.—The question is :

"That the following words shall be added at the end of the motion :

'but regret that—

(a) the Address makes no mention of the deteriorating Food situation in the State and the Government's inability to handle it ;

(b) Government have curtailed Civil Liberties and Democratic rights ;

(c) the Address does not make mention of the achievements of the Third Five Year-Plan ;

(d) the Address does not fully focus the Labour unrest in the State and the failure of the Government to solve un-employment problem'."

The amendment was negatived.

Mr. SPEAKER.—The question is :

"That the following words shall be added at the end of the motion :

'but regret that—

(a) the Address fails to mention the steps taken by the Government to handle the food situation and for providing food to the starving masses without any means, in the scarcity hit rural area ;

(b) the Address makes no mention of the steps taken by the Government with regard to the Act relating to the Abolition of the Hereditary Rights in the light of the recent judgement of the Supreme Court'."

The amendment was negatived.

MR. SPEAKER.—The question is:

"That the following words shall be added at the end of the motion:

'but regret that—

(a) Government have failed to supply adequate foodstuffs to the famine stricken population in rural areas and small towns and it has failed to provide employment to rural labourers;

(b) the Address makes no mention of restoring the curtailment of Civil liberties and Democratic rights;

(c) the Address fails to mention about solving the labour unrest and about increasing their standard of living;

(d) Government have failed to take concrete measures to improve agriculture in the Dry Districts of the State by providing adequate funds to sink Irrigation Wells in large number;

(e) Government have failed to abolish Land Revenue levy on small holdings;

(f) Government have failed to abolish prohibition in the State'."

The amendment was negatived.

MR. SPEAKER.—The question is:

"That the following words shall be added at the end of the motion:

'but regret that—

(a) the Address is silent on the important issue of re-distribution of the State Boundaries on Linguistic basis;

(b) the Address fails to mention about the question of safeguarding the interests of linguistic minorities;

(c) the Address is silent on the important issue of wiping out corruption, nepotism and inefficiency in the administration of the State;

(d) Government have failed in their duty to supply sufficient food to the people of the State;

(e) Government have failed in not taking proper steps in purchasing food grains from big land-holders;

(f) the Address makes no indication to scrap up prohibition;

(g) the proposals for increasing taxation on already starved people is inhuman."

The amendment was negatived.

Mr. SPEAKER.—The question is :

" That the following words shall be added at the end of the motion :

' but regret that—

(a) Government have failed to indicate the way to achieve the goal of the socialistic pattern of society set before the Nation ;

(b) the Address fails to mention about the programme of rural industrialisation, particularly, the processing industries;

(c) Government have failed to raise the standard of education at all levels in the State ;

(d) Government have failed to establish the Panchayat Raj in the State on sound foundation by initiating reforms in the structure of the Panchayat Raj Institutions so as to give wider powers to the masses of the peeple ;

(e) Government have utterly failed to settled the Border disputes of the State with the neighbouring State particularly Kasargod and the Marathi speaking areas, in spite of the assurances given by the Government in December, 1956'."

The amendment was negatived.

Mr. SPEAKER.—The question is :—

"That the following words shall be added at the end of the motion.

' but regred that—

(i) Government have failed.—

(a) to consider the State as one Unit and taking upon themselves the responsibility of procurement, storage and distribution of foodgrains ;

b) to control the prices of essential commodities ;

(c) to make Kannada as the medium of instruction in all schools and colleges of the State and to use Kannada for Official correspondences in Courts and Offices ;

(d) to enforce Land Reforms ;

(e) to amend the Levy Order in view of the loses of crops due to failure of monsoon rains and to solve the famine condition in the State, to introduce the rationing throughout the State ;

(f) in giving remission of Land Revenue ;

(ii) the Address fails to mention measures to be taken to root out the defects in the Administration of the Government. "

The amendment was negatived.

5-30 P.M.

Mr. SPEAKER.—The question is :

"that we, the members of the Mysore Legislative Assembly assembled in this Session beg leave to thank the Governor for the Address delivered to the members of the Legislature on 28th January 1966."

Sri K. P. REVANASIDDAPPA.—I press for a division.

Mr. SPEAKER.—The Division bell will ring. (The bell rang for 2 minutes).

Mr. SPEAKER.—I will again put the motion to the vote of the House. The question is :

"that we, the members of the Mysore Legislative Assembly assembled in this Session beg leave to thank the Governor for the Address delivered to the members of the Legislature on 28th January 1966."

The motion was adopted.

MYSORE SALES TAX (AMENDMENT) BILL, 1966.

Motion to Consider.

Sri RAMAKRISHNA HEGDE (Minister for Finance).—I beg to move :

"That the Mysore Sales Tax (Amendment) Bill, 1966, be taken into consideration".

Mr. SPEAKER.—Motion moved :

That the Mysore Sales Tax (Amendment) Bill, 1966, be taken into consideration."

† RAMAKRISHNA HEGDE.—Sir, this Bill has been brought forward with two important objects, namely one to augment the resources of the State to enable the Government to undertake various development schemes included in the 4th plan and secondly to remove certain lacunae that exist in the present Act. I would like to refer only to those points which are very important It has been proposed to increase the rate of sales tax on turnover from 2% to 3% and also in respect of certain items certain increase has been proposed as detailed in the Bill. It has also been proposed to raise the limit of exemption of Rs. 7,500 to Rs. 10,000 so that small dealers, petty shopkeepers, etc. are kept out of the purview of this legislation.

Another important point in this Bill is to provide a rebate of 1 per cent in respect of certain luxury goods on production of proof that Central sales tax has been paid thereon. This is necessary because if the incidence of the tax is higher than in the neighbouring States, there